ಕೊರವಂಜಿ

KORAVANJ
Kannada Monthl



ನವೆಂಬರ್
೧೯೬೩

ಸಂಪಾದಕರು :
ಶ್ರೀ|| ರಾ. ಶಿ

ಬರಹಗಾರರು :

ಶ್ರೀ|| ನಾ. ಕಸ್ತೂರಿ
ಶ್ರೀ|| ಅ. ರಾ. ಸೆ.
ಶ್ರೀ|| ರಾಮಿ
ಶ್ರೀ|| ಕೇಫ
ಶ್ರೀ|| ನಾ.ಸಾ. ಲಚ್ಚಯ್ಯ
ಶ್ರೀ|| L. S ಶೇಷಗಿರಿರಾ
ಶ್ರೀ|| ಬಚ್ಚ
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾ

೨೫
ನ. ಪೈ.

ತಿಳಿನಗೆಯ ಮಾಸಪತ್ರಿಕೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, November 1963

ಕೊರವಂಜಿ

ಸಂಪುಟ ೨೨   ನವೆಂಬರ್ ೧೯೬೩   ಸಂಚಿಕೆ ೮

★ ಕುಹಕಿಡಿಗಳು ★

ಕಟ್ಟುಕತೆಗಳನ್ನು ಹೇಳ್ತಾ ಇದ್ದಳಲ್ಲ. ಆ ಅಡುಗೂಲಜ್ಜಿ ಏನಾದಳು?
—ಆಗೋದೇನು! ಪ್ಲಾನಿಂಗ್ ಕಮಿಷನ್ನಿನಲ್ಲಿ ಮೆಂಬರಾದಳು.

* * * *

ಕಾಮರಾಜ ಸೂತ್ರವು ಬಲು ಯಶಸ್ವಿ ಎಂದು ಮೊರಾರ್ಜಿಯವರು ಹೇಳಿದರಂತೆ
—ಬಾಲ ಕತ್ತರಿಸಿದ ನರೀನೂ ಹಾಗೇ ಹೇಳಿತ್ತು.

* * * *

ಮಕ್ಕಳೇ ನಮ್ಮ ಆಸ್ತಿ ಎಂದು ಶಾಲಾ ಉಪಾಧ್ಯಾಯರು ಹೇಳಿದರಂತೆ.
—ಹಾಗೆ ಹೇಳಬೇಡಿ ಮಾಸ್ತರೇ! ಸರ್ಕಾರ ಕಸುಕೊಂಡು ಬಿಟ್ಟಾರು! ಅವರನ್ನೂನು!!

* * * *

ಯೂರೋಪ್ ಮತ್ತು ಅಮೆರಿಕಾಗಳ ನಡುವೆ ಏರ್ಪಟ್ಟಿದ್ದ "ಕೋಳಿಕಾಳಗ" ಈಗ ತೃಪ್ತಿಕರವಾಗಿ ತೀರ್ಮಾನವಾಗಿದೆಯಂತೆ.
—ನಮ್ಮ ದೇಶದಲ್ಲಿ ಕಾಮರಾಜ ಸೂತ್ರದ ನಂತರ ಶುರುವಾದ "ಜಂಭದ ಕೋಳಿ ಕಾಳಗ" ತೀರ್ಮಾನವಾಗುವಹಾಗೆ ಕಾಣಿಸೋದೇ ಇಲ್ಲ!!

* * * *

ರಾಮಮನೋಹರ ಲೋಹಿಯಾ ಅವರ ಪಾರ್ಟಿಗೆ, ಅವರೇ Opposition ಕೂಡಾ.

ಶ್ರೀಮತಿ ಸುಚೇತಾ ಕೃಪಲಾನಿಯವರು ತಪ್ಪು ಬಾಗಿಲಿನಲ್ಲಿ ಪ್ರವೇಶಿಸಿದರು ಎಂದು ಹೊರಕ್ಕೆ ಕಳಿಸಲಾಯಿತಂತೆ.

—ಹೆಣ್ಣು ಮಕ್ಕಳು ಹೆಬ್ಬಾಗಿಲಿನ ಮೂಲಕ ಎಲ್ಲರಿಗೂ ಕಾಣೋ ಹಾಗೆ ಗೃಹ ಪ್ರವೇಶ ಮಾಡಿದರೆ ಮಂಗಳಕರ, ಅಲ್ಲವೇ?

* * * *

ಪಕ್ಕದಲ್ಲಿರೋ ಹುಡುಗರನ್ನ ಜಿಗಟುವ ಚಾಳಿ ನಮ್ಮ ಹುಡುಗನಿಗಿದೆ. ಏನು ಚಿಕಿತ್ಸೆ ಮಾಡಿದರೆ ಸರಿ ಹೋಗುತ್ತೆ ಎಂದು ಕೇಳಿದ್ದಾರೆ.

—ಮುಂದಕ್ಕೆ ಆ ಹುಡುಗ ಅರ್ಥಸಚಿವನಾಗ್ತಾನೆ, ಹೆದರಬೇಡಿ!

* * * *

ಸರಸ್ವತಿ ಪೂಜೆಯ ದಿನದಂದು, ಆಕಾಶವಾಣಿಯಲ್ಲಿ "ಟೇಪು"ಗಳನ್ನು ಇಟ್ಟು ಪೂಜಿಸಿದರು ಎನ್ನುವುದು ಶುದ್ಧ ಊಹೆ.

* * * *

ಬೆಂಗಳೂರಿನಲ್ಲಿ ಹೊಸದಾಗಿ ಹಾಕುತ್ತಿರುವ ಕನ್ನಡದ ಫಲಕಗಳನ್ನು ನೋಡಿದಾಗ ಅವುಗಳ ಅವಲಕ್ಷಣ ಅಕ್ಷರಗಳನ್ನು ಕಂಡಾಗ—

—ಶತ್ರುಗಳು ಈ ಫಲಕಗಳನ್ನು ಬರೆದಿದ್ದಾರೆ ಅನ್ನಿಸುತ್ತೆ.

* * * *

ರಾಯಚೂರು ಮುನಿಸಿಪಾಲಿಟಿಯಲ್ಲಿ, ಮಾಜಿ ಹೈದ್ರಾಬಾದಿನ ಕಾನೂನು ಪುಸ್ತಕವೇ ಮಾಯವಾಗಿದೆಯಂತೆ.

—ಕೂಸು ಸತ್ತಮೇಲೆ ಜಾತಕ ಇದ್ದರೇನು ಹೋದರೇನು?

* * * *

ಈ ವರ್ಷ ಸುಮಾರು ಎರಡು ಲಕ್ಷ ಜನರು ದಸರಾದಲ್ಲಿ ಪ್ರದರ್ಶನ ಮಾಡಿಕೊಂಡರಂತೆ; ಮೈಸೂರಿನಲ್ಲಿ.

* * * *

ಸರ್ಕಾರಿ ಕಚೇರಿಗಳಲ್ಲಿ ಪೋಲೀಸಿನವರ ಪ್ರವೇಶಕ್ಕೆ ಅನುಮತಿ ನೀಡಬಾರದು ಎಂದು ಹಲವಾರು ಅಧಿಕಾರಿಗಳ ಮತ.

—ನ್ಯಾಯವೇ! ನಿದ್ರೆ ಮಾಡುತ್ತಿರುವಾಗ ಬಂದು ಎಬ್ಬಿಸಿಬಿಟ್ಟರೆ?

* * * *

ಪಾಕಿಸ್ತಾನದ ಭುಟ್ಟೋ ಅವರು ಪ್ಯಾರಿಸಿನಲ್ಲಿ

ಪತ್ರಿಕಾ ವರದಿ

—ಕ್ರಿಸ್ಟೀನ್ ಕೀಲರ್ ತಂಗಿ ಅಲ್ಲೆಲ್ಲಿಯಾದರೂ ಇದ್ದಾಳೆಯೇ?

ಅರವಾ ಮೊದ್ದುವಿನ ಸಮಸ್ಯೆ

ವದ್ದ್ಯಾಡ್ತಾ ಇದ್ದ, ಅರವಾಮೊದ್ದು, ಆ ಸಂಜೆ ಕ್ಲಬ್ಬಿನ ವರಾಂಡದಲ್ಲಿ. ಮೇಜಿನ ಎದುರಿಗೆ ಒಬ್ಬನೇ ಕೂತಿದ್ದಾನೆ. ತುಂಬಿದ ಲೋಟಾ ಎದುರಿನಲ್ಲಿದೆ. ತುಂಬಿದ್ದು ತುಂಬಿದ ಹಾಗೆಯೇ ಇದೆ. ಇವನೇನೋ ತೊಣಚಿ ಹೊಕ್ಕ ನಾಯಿಯ ಹಾಗೆ, ಆಡ್ತಾ ಇದ್ದಾನೆ. ಲೋಟಾ ಪಕ್ಕದಲ್ಲಿ ಕಾಗದದ ಚೂರುಗಳ ಮೇಲೆ ಚಿತ್ರ ವಿಚಿತ್ರಗಳನ್ನು ಬರೆಯುತ್ತಾ ಇದ್ದಾನೆ.

ದೂರದಿಂದಲೇ ಅವನ ಮುಖ ನೋಡಿ, "ಅಮಾವಾಸ್ಯೆ ಹತ್ತಿರಕ್ಕೆ ಬಂತು. ಇವತ್ತೇ ಕೆರಳುಕ್ಕೆ ಶುರುವಾಗಿದೆ. ಇವನ ಸಹವಾಸವೇ ಬೇಡ" ಅಂತ ನಾನು ಹುಲ್ಲುಗಾವಲ ಕಡೆಗೆ ಹೋದೆ.

ಸ್ವಲ್ಪ ಹೊತ್ತಿನಲ್ಲೇ ಕೊರವ ಕ್ಲಬ್ಬಿಗೆ ಬಂದ. ವರಾಂಡಾದಲ್ಲಿ ಒಂಟಿಯಾಗಿ ಕುಳಿತಿದ್ದ ಅರವಾಮೊದ್ದುವನ್ನು ಅವನೂ ನೋಡಿದ ಒಂದೆರಡು ನಿಮಿಷ ನೆಟ್ಟಿ ನೋಡಿದ. ಆಮೇಲೆ ಅವನೂ ಮೆಲ್ಲಗೆ ಹುಲ್ಲುಗಾವಲಿಗೆ ಬಂದು ನನ್ನ ಮೇಜಿನ ಬಳಿಗೆ ಬಂದು ಕುಳಿತ.

ಅರವಾಮೊದ್ದುವನ್ನು ಬೆರಳಲ್ಲಿ ತೋರಿಸುತ್ತ, ನನ್ನ ಹಣೆಯನ್ನು ಮುಟ್ಟಿ ತೋರಿಸುತ್ತಾ, "ಅವನ ತಲೆ ಕೆಟ್ಟಿದೆ ಅಂತ ಕಾಣುತ್ತೆ. ತುಂಬಿದ ಲೋಟಾದ ಎದುರಿನಲ್ಲಿ ಚಿತ್ರ ಬರೀತಾ ಕೂರ್ತ್ತಿರ್‍ಯೇ ಇಲ್ಲದೆ ಇದ್ದರೆ" ಅಂದೆ, ಪಿಸು ದನಿಯಲ್ಲಿ.

"ಅಲ್ಲ, ಹಾಗಲ್ಲ. ವಿಷಯ ಗಂಭೀರವಾದುದು" ಎಂದ ಕೊರವ.

"ಹುಚ್ಚು ಕೆರಳುವುದು ಗಂಭೀರವಾದ ವಿಷಯವೇ" ಎಂದೆ.

"ಹುಚ್ಚಲ್ಲ ಕೆರಳುತಿರೋದು ಅವನ ಸಮಸ್ಯೆ ನಿನಗೆ ಬಂದಿದ್ದರೆ, ನೀನೂ ಹಾಗೇ ಆಡ್ತಾ ಇದ್ದೆ" ಎಂದ ಕೊರವ.

"ಅಂತಾ ಸಮಸ್ಯೆ ಏನೋ! ಹುಳುತು ಹೋಗೋ ಅಷ್ಟು ದುಡ್ಡಿದೆ ಅವನಿಗೆ. ಸಂಸಾರ ನಿರ್ವಹಿಸೋ ಜವಾಬ್ದಾರಿಯನ್ನೆಲ್ಲ ಚೂಟಿ ಹೆಂಡತಿ ವಹಿಸಿಕೊಂಡಿದ್ದಾಳೆ. ಇವನಿಗೇನು ಕೇಡು! ಸಂಸಾರದಲ್ಲಿ ಕರ್ಮಣಿಪವ ಅಧಿಕಾರ ಇವನಿಗೆ. ಮಹಾ ಫಲೇಷು!" ಎಂದೆ.

"ಓಹೋ! ಸಂಸ್ಕೃತದ ಶ್ಲೋಕ ಬೇರೆ, ನಿನ್ನ ಬಾಯಲ್ಲಿ. ಯಾವ ಪತ್ರಿಕೆಯ ಸೂಕ್ತಿ ಸುಧೆಯನ್ನು ಓದಿ ಗಟ್ಟಿಮಾಡಿಕೊಂಡೆ" ಎಂದ ಕೊರವ.

ನನ್ನ ಗುಟ್ಟನ್ನು ಗೊತ್ತು ಹಚ್ಚಿದನಲ್ಲಾ ಅಂತ ನನಗೆ ಸ್ವಲ್ಪ ಬೇಸರವಾಯ್ತು ಅದಕ್ಕೇ ತೆಪ್ಪಗಿದ್ದೆ. ಬಲಗಾಲಿಂದ ಎಡಗಾಲನ್ನು ಬೂಡ್ಸಿನ ಮೇಲೆಯೇ ಕೆರೆದು ಕೊಳ್ಳಲು ಶುರುಮಾಡಿದೆ.

"ನೀನು ಹೇಳಿದೆಯಲ್ಲಾ, ಮಾ ಫಲೇಷು ಅಂತ. ಅದೇ ಸುಳ್ಳು" ಅಂತ ಮುಂದುವರೆಸಿದ. ಕೊರವ ಅಲ್ಲಿಗೇ ಮಾತನ್ನು ನಿಲ್ಲಿಸಿದ.

ಸಿಗರೇಟ್ ತೆಗೆದುಕೊಟ್ಟು, ಬೆಂಕಿಪೆಟ್ಟಿಗೆಯನ್ನು ಅವನೆದುರಿಗೆ ಹಿಡಿದೆ. ಸಿಗರೇಟ್ ಹಚ್ಚಿ, ಒಂದು ದಂ ಎಳೆದು ಕೊರವ ಮುಂದುವರೆಯುತ್ತಾ,

"ನೋಡು ಅರವಾಮೊದ್ದುವಿನ ಮೊದಲ ಮಗಳು, ಪಂಕಜ. ಅವಳಿಗೆ ತೋಳಿನ ಮೇಲೆ ಸಿಡುಬು ಹಾಕಿಸಿದ. ಎರಡನೆಯ ಮಗು, ಮಧುಮತಿಗೆ ಸಿಡುಬು ಹಾಕಿಸಬೇಕಾದಾಗ, ಅವನ ಹೆಂಡತಿ ಹೇಳಿದಳು. ಈಗಿನ ಕಾಲದಲ್ಲಿ ತೋಳಿನ ಮೇಲೆ ಯಾರು ಸಿಡುಬು ಹಾಕಿಸ್ಕೋತಾರೆ, ತೋಳಿಲ್ಲದ ರವಿಕೆಯನ್ನೇ ಇನ್ನು ಮುಂದೆ ಹೆಂಗಸರು ಹಾಕಿಕೊಳ್ಳೋದು. ಪಂಕಜನ ತೋಳನಕ ಅವಲಕ್ಷಣವಾಗಿ ಹೋಯ್ತು ಅದಕ್ಕೇ ಮಧುಮತಿಯ ತೊಡೆಯ ಪಕ್ಕದಲ್ಲಿ ಸಿಡುಬು ಹಾಕಿಸಬೇಕು ಅಂತ.

ಮೂರನೆಯ ಮಗಳು ಮಾಲ್ಯವಂತಳಿಗೆ ಸಿಡುಬು ಹಾಕುವ ಹೊತ್ತಿಗೆ ಹೆಣ್ಣು ಉಡುಪಿನ ಪ್ರಗತಿಯು ಅಣುಬಾಂಬಿನ ನಾಯಿಕೊಡೆಯಂತೆ ಮುಂದುವರೆದಿತ್ತು. ಹಾಗಾಗಿ ಕತ್ತಿನ ಹಿಂಬಾಗದಲ್ಲಿ ಸಿಡುಬು ಹಾಕಿಸಿದರು.

ಈಗ ನಾಲ್ಕನೇ ಹೆಣ್ಣುಮಗಳಾಗಿದೆ ತೊಟ್ಟಿಲಿಟ್ಟ ದಿನ ನನ್ನನ್ನೂ ಊಟಕ್ಕೆ ಕರೆದಿದ್ದ. ಇನ್ನು ಮೂರು ನಾಲ್ಕು ತಿಂಗಳಲ್ಲಿ ಅದಕ್ಕೆ ಸಿಡುಬು ಹಾಕಿಸಬೇಕು ಎಲ್ಲಿ ಹಾಕಿಸಬೇಕು? ಆ ಮಗು ಬೆಳೆಯುವ ಹೊತ್ತಿಗೆ ಹೆಣ್ಣು ಉಡುಪಿನ ಪ್ರಗತಿಯು ಯಾವ ಭಾಗವನ್ನು ಮುಚ್ಚಿಸುತ್ತದೋ, ಯಾವ ಭಾಗವನ್ನು ಪ್ರದರ್ಶಿಸುತ್ತದೆಯೋ ಅದನ್ನು ತೀರ್ಮಾನಿಸಲಾರದೆ ವದ್ದಾಡ್ತಾ ಇದಾನೆ" ಎಂದ.

ಅರವಾಮೊದ್ದುವಿನ ಸಮಸ್ಯೆ ಅತಿ ಗಭೀರವಾದುದು ಅಂತ ಆಗ ನನಗೆ ತಿಳಿಯಿತು. ಅವನ ಸಾಲು ಸಾಲು ಹೆಣ್ಣುಮಕ್ಕಳೆಲ್ಲಾ ಬೆಳ್ಳಬೆಳ್ಳಗೆ ಇದ್ದುವು. ಸಿಡುಬಿನ ಕಲೆ ಎದ್ದು ಕಾಣಲು ಸಾಧ್ಯ! ಪಾಪ.

ಚಾಚಿದ ಅಂಗೈ

ಲತಾ ಮಂಗೇಶ್‌ಕರ್ ಏಕೆ ಈ ಬಸ್ಸಿನ ಮೂಲೆ ಸೀಟಿನಲ್ಲಿ ಕುಳಿತು ಹಾಡುತ್ತಿದಾಳೆ, ಎಂದು ನಾನು ಒಂದು ನಿಮಿಷ ಹೆದರಿ ಬೆಚ್ಚಿಬಿದ್ದೆ; ಎಂಥವರಿಗೂ ತಪ್ಪಿದ್ದಲ್ಲ, ದುರಾದೃಷ್ಟ ಎಂದು ನನ್ನ ಎದೆಯೊಳಗೆ ಒಂದು ದನಿ ಎದ್ದಿತು. ಅಷ್ಟರಲ್ಲಿ ತಿಳಿಯಿತು, ಆ ಮೂಲೆಯಲ್ಲಿ ಕುಳಿತು ಹಾಡುವುದು ಒಂದು ರೇಡಿಯೊ, ಟ್ರಾನ್‌ಸಿಸ್ಟರ್ ರೇಡಿಯೊ, ಯಾವನೋ ಯುವಕ ತನ್ನ ಕುತ್ತಿಗೆಗೆ ನೇತಾಡಿಸಿಕೊಂಡಿರೋ 'ನ್ಯೂಸೆನ್ಸ್' ಎಂಬುದು.

ಕಂಡಕ್ಟರಿಗೂ ಅವನ ಪಕ್ಕದಲ್ಲಿದ್ದ ಕ್ಲೀನರಿಗೂ ಆನಂದಾತಿರೇಕ. ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ನಾವು ಹದಿನಾಲ್ಕು ಜನಕ್ಕೂ ಬೇಸರ....ನಮ್ಮ ನಮ್ಮ ಮಾತುಕಥೆ, ಕುಶಲ ಪ್ರಶ್ನೆ, ಬೆಳೆ ಮಳೆ, ಇತ್ಯಾದಿ ವಿಷಯಗಳಲ್ಲಿ ನಮಗೆ ಆಸಕ್ತಿ. ತಾನೇ ಉಂಟುಮಾಡೋ ತಲೆ ನೋವಿಗೆ ತಾನೇ ಗುಳಿಗೆಗಳನ್ನು ಸಲಹೆ ಮಾಡುತ್ತಿದ್ದ, ಆ ಪೀಡೆ ಪೆಟ್ಟಿಗೆಯ ಗೋಳು ಯಾರಿಗೂ ಬೇಕಿರಲಿಲ್ಲ. ಡ್ರೈವರ್ ಮಹಾಶಯ ಕೂಡ, "ಪಾಕಿಸ್ತಾನಿಗೆ ತಿರುಗಿಸಿರಿ. ಇದು ಒಳ್ಳೇ ಟೈಂ, ಅಲ್ಲಿಂದ ಸೊಗಸಾದದ್ದು ಕೇಳಿಬರುತ್ತದೆ" ಎಂದು ಕೂಗಿ ಹೇಳುತ್ತಲೇ ಇದ್ದ. ನಮಗೆ ಇತ್ತ ಸಿಲೋನೂ ಬೇಡ, ಅತ್ತ ಅಯೂಬೂ ಬೇಡ, ನೆಮ್ಮದಿಯಾಗಿ ಊರು ಸೇರಿದರೆ ಸಾಕಪ್ಪಾ ಎನಿಸಿತು. ಆದರೆ, ಆ ಮೂಲೆ ಸೀಟಿನವನು ಬಿಟ್ಟರೆ ತಾನೆ? ಆಕಾಶಮಾರ್ಗವಾಗಿ ಹೋಗುತ್ತಿದ್ದ ಅಪಶಬ್ದಗಳನ್ನೆಲ್ಲ ಅವನು ನಮ್ಮ ಕಿವಿಗಳೊಳಗೆ ಹಾಯಿಸಿದ. ಮನುಷ್ಯ ಪ್ರಾಣಿ ಪರಸ್ಪರ ಕಾದಾಡಲು ಬಳಸುತ್ತಿರುವ ಎಲ್ಲಿ ಭಾಷೆಗಳನ್ನೂ ನಮ್ಮ ಬುರುಡೆಯೊಳಕ್ಕೆ ತೂರಿಸಿದ. ಸಂಗೀತದ ಹೆಸರಿನಲ್ಲಿ ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಶಬ್ದಾಸ್ತ್ರಗಳನೆಲ್ಲ ಪ್ರಯೋಗಿಸಿದ. ಹೊರಕ್ಕೆ ಹಾರಲು ಸಾಧ್ಯವಿಲ್ಲದೆ—ಕಿಟಕಿಗಳಿಗೆಲ್ಲ ಕಂಬಿ—ಊರೂ ಬರದೆ, ನಿಸ್ತ್ರಾಣರಾಗಿ ನಾವು ಅವನ ರೇಡಿಯೋ ಕೇಳುತ ಕುದಿಯುತ್ತಿದ್ದೆವು ಒಂದು ಗಂಟೆ ಕಾಲ.

ಆಗ, ಇದ್ದಕ್ಕಿದ್ದ ಹಾಗೆ, ಗಾಣ ಕೋಲಾಹಲ ನಿಂತಿತು. ಸದ್ಯಃ ಅದರ ಆಯುಸ್ಸು ಮುಗಿಯಿತು ಎಂದು ನಾವು ಸಮಾಧಾನ ಪಟ್ಟೆವು. ಆದರೆ, ಅದೇಕೋ ಆ ಪರಹಿಂಸಾಪರಾಯಣ ಎದ್ದು ನಮ್ಮ ಕಡೆಗೇ ಆ ಪ್ರಾರಬ್ಧ ಸಹಿತ ನಡೆದು ಬರುತ್ತಿದ್ದ. ಲತಾ ಮಂಗೇಶ್‌ಕರ್ರೇ ಇರಲಿ, ಹೊಟ್ಟೆಯಲ್ಲಿ ತಾಳ, ಕಣ್ಣಲ್ಲಿ ನಿದ್ರೆ, ಮೂಗಿನ ತುದಿಯಲ್ಲಿ ಕೋಪ, ಬೆನ್ನಲ್ಲಿ ಸಂಸಾರದ ಭಾರ, ತಲೆಯೊಳಗೆ ಸಿಡಿತ, ಇರುವಾಗ ಯಾರಿಗೆ ತಾನೆ ಬೇಕು, ಆ ರಿಕಾರ್ಡ್ ಸಂಗೀತ, ಆ ಆಸ್ಪ್ರೋ ಗುಳಿಗೆ· ಪ್ರಚಾರಕ್ಕಾಗಿ ಮಾಡುವ ಕಾರ್ಯಕ್ರಮ. ಅಂತಹ ಅಸಹ್ಯ ಆಕಾಶದಲ್ಲಿ ಆದರ ಪಾಡಿಗೆ ಅದು ತೇಲಿ ಹೋಗುತ್ತಿದ್ದರೆ, ಅದನ್ನು ಹಿಡಿದು, ಹೊರಪಡಿಸಿ, ಹಿಂಸಿಸಿದ ಆ ಪೆಟ್ಟಿಗೆ ಸಹಿತ, ಆ ವಿಲಾಸೀ ಯುವಕನನ್ನು ನಾನು ಸ್ವಾಗತಿಸಲೇ ಇಲ್ಲ. ಮುಖವನ್ನತ್ತ ತಿರುಗಿಸಿ, ಬಸ್ ಕಿಟಕಿ ಕಂಬಿಗಳ ಮೂಲಕ ರಸ್ತೆಯಲ್ಲಿ ಉಗುಳಿದೆ.

ಆತ ನನ್ನ ಬೆನ್ನನ್ನು ತಟ್ಟಿದ! ನನ್ನ ಮುಖದೆದುರು ಅಂಗೈ ಚಾಚಿದರೆ ಸರಿ! ಆಸೇತು ಹಿಮಾಚಲ ಹರಡಿರುವ ಈ "ದೇಹಿ ಜಾಡ್ಯ" ಇಂಥ ಶ್ರೀಮಂತನಿಗೂ ಬಂತೇ, ಎಂದು ನಾನು ವಿಚಾರ ಮಗ್ನನಾದೆ-

ಯುವಕ ಬಿಡಲಿಲ್ಲ; ಬಾಯಿ ತೆಗೆದು, ಕೈಗೆ ಬೆಂಬಲವಿತ್ತ; "ಹಾಕಿರಿ, ಹತ್ತು ಪೈಸಾ! ಹಾಯಾಗಿ ರೇಡಿಯೋ ಕೇಳುತ್ತ ಕೂತುಬಿಟ್ಟ, ಕಾಸು ಕೊಡದೆ ಇಳೀತೀರಾ?" ಎಂದು ಗದರಿಸಿದ.

"ಕೊಟ್ಟು ಬಿಡಿರಿ, ಕೊಡಿರಿ" ಎಂದು ಕಂಡಕ್ಟರು ಬೇರೆ, ಆ ಡಕಾಯಿತನಿಗೆ ಪ್ರೋತ್ಸಾಹ. ಕ್ಲೀನರಂತೂ, ಟ್ರಾನ್‌ಸಿಸ್ಟರ್‌ನವನ ಪರಮ ಸ್ನೇಹಿತ.

ಇನ್ನು ನಾವು, ಬಡ ಪ್ರಯಾಣಿಕರು, ಉಳಿಯುವುದು ಹೇಗೆ? ತೆತ್ತೆವು, ಹತ್ತು ಹತ್ತು! ಚಿಪ್ಪು ಮೋರೆ ಸಹಿತ ಕೊಟ್ಟ ಕಾಸಿಗೆ ಇನ್ನೊಂದಿಷ್ಟು ಹೊತ್ತು ತಿರುಗಿಸೋ ನಿನ್ನ ಹಾಳು ರೇಡಿಯೋನ, ಎಂದು ಕೇಳುವ ಧೈರ್ಯ ಒಂದು ನರಪಿಳ್ಳೆಗೂ ಬರಲಿಲ್ಲ.

ಆಗ ಡ್ರೈವರು ಮಾತಾಡತೊಡಗಿದ. "ಅಲ್ರಿ! ನೀವೆಲ್ಲ ಆಳಿಗೆ ಹತ್ತು ಪೈಸಾ ಕೊಟ್ಟದ್ದರಿಂದ ತಾನೆ, ಅವನೂ ಅವನ ಹೆಂಡತಿ ಮಕ್ಕಳೂ ಹಾಯಾಗಿ ಬಾಳುವುದು. ಪಾಪ. ಈಗಿನ ಕಾಲದಲ್ಲಿ ತಿರುಕರೂ ಹೊಸ ಹೊಸ ಸಾಮಾನು ಹೊತ್ತು ಅಪ್-ಟು-ಡೇಟ್ ಆಗಬೇಕಾಗಿದೆ. ಏಕನಾದ ಹಿಡಿದರೆ ಸಾಕಾಗಿತ್ತು, ಹಿಂದೆ. ಬರಿ ಜೋಳಿಗೆ ತುಂಬುವ ಕಾಲ, ಪುರಂದರ ದಾಸರು ಹುಟ್ಟುವುದಕ್ಕೆ ಮುಂಚೆಯೇ ಮುಗಿದುಹೋಯಿತು! ಹಾರ್ಮೋನಿಯಂ ಹಿಡಿದು ಅದನ್ನೊತ್ತಿ ಹೆದರಿಸಿದರೇನೇ ಕಿಸೆಗಳಿಂದ ಕಾಸುಗಳು ಮೇಲಕ್ಕೆ ಬರುವುದು, ನಿನ್ನೆ ಮೊನ್ನೆವರೆಗೂ! ಈಗ ಟ್ರಾನ್‌ಸಿಸ್ಟರ್ ರೇಡಿಯೋ ಹಿಡಿದು ತಿರುಗುವ ಮಂದಿ ಎಷ್ಟು ಜನರು ಸಿಗುತ್ತಾರೆ, ಪ್ರತಿ ರೈಲಲ್ಲೂ, ಬಸ್ಸಲ್ಲೂ. ಲೆಕ್ಕ ಹಾಕಿ! ಇಲ್ಲೂ ಪೈಪೋಟಿ ಜಾಸ್ತಿ ಆಗಿಬಿಟ್ಟಿದೆ! 300 ರೂ ರೇಡಿಯೋ ಇವನ ಬಂಡವಾಳ; ಅದಕ್ಕೆ ಹತ್ತು ಪೈಸಾ ಕೇಳಿದ, ಇವನು! ಐದೈದು ಪೈಸಾಗೇ ಬಾಯಿ ಮುಚ್ಚಿಕೊಂಡು ಹೋದ, ಒಬ್ಬ "ವರಮಹಾಲಕ್ಷ್ಮಿ"ಲಿ ಮೊನ್ನೆ! ಅವನ ರೇಡಿಯೋ ಇನ್ನೂ ಚೀಪು, ಕಾಲ ಕೆಟ್ಟು ಹೋಯ್ತು. ಈ ತಿರುಕರು. ಪಾಪ, ಯಾವ ಹೊಸ ದಾರಿ ಹಿಡಿದರೂ, ಕಾಂಪಿಟಿಷನ್ ಜಾಸ್ತಿ." ಎಂದು ಡ್ರೈವರ್ ಸಹ ತಪಿಸಿದ. ಅಷ್ಟರಲ್ಲಿ, ಬಸ್ ನಿಂತಿತು! ಎದುರುಗಡೆಯಿಂದ ಮತ್ತೆ ಎರಡು ಬಸ್ ಬಂತು, ಫುಲ್ ಭರ್ತಿ ಜನ! ಟ್ರಾನ್‌ಸಿಸ್ಟರ್ ಪೆಟ್ಟಿಗೆ ಸಹಿತ, ಆ ಭಿಕ್ಷುಕ ಅದನ್ನು ಹತ್ತಿದ, ಅದರ ಗುಂಡಿ ತಿರುಗಿಸಿ, ಅವರನ್ನು ಪೀಡಿಸತೊಡಗಿದ.

ನಾನೊಂದು ನಿಶ್ಚಯಕ್ಕೆ ಬಂದಿದ್ದೇನೆ. ರೈಲಲ್ಲಾಗಲಿ ಬಸ್ಸಲ್ಲಾಗಲಿ, ಇಂತ ರೇಡಿಯೋ ಸಹಿತ ಯಾವನಾದರೂ ಕಂಡು ಬಂದರೆ, ಹತ್ತು ಪೈಸಾ ಅವನ ಮುಂದಿಟ್ಟು, "ಸ್ವಾಮಿ! ಇಗೊ! ತೆತ್ತಿದ್ದೇನೆ; ಅದನ್ನೊತ್ತಬೇಡಿ" ಎಂದು ಕೇಳಿ ಕೈ ಮುಗಿದುಬಿಡುತ್ತೇನೆ.

—ನಾ. ಕಸ್ತೂರಿ

ಅಸೋಸಿಯೇಷನ್ ಕ್ರಿಕೆಟ್

ಕೌಡ್ರೆ ಬರುವುದು ಇಲ್ಲವೆಂದಾದಮೇಲೆ ಬರುವ ಸೀಸನ್ ಕ್ರಿಕೆಟ್‌ನಲ್ಲಿ ಇಟ್ಟ ಆಶೆ ನಿರಾಶೆಯಾಯಿತೆಂದ ಹಾಗೇ! ಊಟಕ್ಕೆ ಕರೆದವರ ಮನೆಯಲ್ಲಿ ಅಂಬೊಡೆ ಮಾಡುತ್ತಾರೆಂದು ನಿರೀಕ್ಷಿಸಿ, ಕೋಸಂಬರಿಯೇ ಹಿರಿದು ಅಡಿಗೆ ಎಂದು ಔತಣದ ಹಿಂದಿನ ದಿನವೇ ಖಾಯಂ ಆದರೆ ಹೇಗೋ ಹಾಗೆ. "ಕಂತ್ರಿ" ಆಟ ಎಂದು ನಾವು ಹೇಳುತ್ತಿಲ್ಲ. ಆದರೆ ಸ್ಕೋರುಗಳ ಬಗೆಗಿದ್ದ ಕುತೂಹಲ ನಾಶವಾಗಿ ಹೋಯಿತು. ಆದುದರಿಂದ ಅಸೋಸಿಯೇಷನ್ ಕ್ರಿಕೆಟ್ ಕಡೆಗೆ ನನ್ನ ಕುತೂಹಲ ಹರಿದಿದೆ.

ಕೆಲ ದಿನಗಳ ಹಿಂದೆ ಕೊನೆಗೊಂಡ ಇಂಗ್ಲೆಂಡ್ ಮತ್ತು ವೆಸ್ಟಿಂಡೀಸ್ ಟೀಮುಗಳ ಆಟದ ವಿಷಯವಾಗಿ ಕೆಲವು ಮಾತುಗಳನ್ನು ಹೇಳದಿದ್ದರೆ ಮನಸ್ಸಿಗೆ ಶಾಂತಿ ಬರುವಂತಿಲ್ಲ. ವೆಸ್ಟಿಂಡೀಸ್ ಟೀಮು ಗೆದ್ದು ವೊರೆಲ್ ನಾಯಕತ್ವದ ಬಗೆಗೆ ವಿಶ್ವದಾದ್ಯಂತ ಪ್ರಶಂಸೆ ಬಂದಿತಷ್ಟೆ. ನನ್ನನ್ನು ಕೇಳಿದರೆ ಇಂಗ್ಲೆಂಡಿನ ಟೀಮಿನ ಆ ಶಕ್ತಿ, ವೆಸ್ಟಿಂಡೀಸರ ಶಕ್ತಿ ಎಂಬ ತಪ್ಪಾದ ಗ್ರಹಿಕೆ ಜನಕ್ಕಾಗಿದೆ. ಗ್ರಿಫಿತ್, ಕ್ಯಾರ್ಯು ರಾಡ್ರಿಗ್ಯೂಸ್ ಇತ್ಯಾದಿ ಹೆಸರುಗಳಿರುವ ಟೀಂ ವಿಶ್ವದ ಅಗ್ರಗಣ್ಯ ಟೀಮೆಂದು ಒಪ್ಪಿಕೊ ಕೊಳ್ಳುವುದು ಅಸಾಧ್ಯ.

ಕಳೆದ ತಿಂಗಳು ನಡೆದ ಕ್ವಾಡ್ರ್ಯಾಂಗುಲರ್ ಟೂರ್ನಿಯಲ್ಲಿ ಸಿಟಿ ಇಲೆವೆನ್, ಕಡೆಯ ಗಳಿಗೆಯಲ್ಲಿ ಸೋತು ಹೋಗಲು ಕಾರಣವನ್ನು ಇದರಿಂದಲೇ ನಾವು ಊಹಿಸಬಹುದು. ಜೀವನದ ಯಾವುದೇ ರಂಗದಲ್ಲಿ ಧುರ್ಧರಕರ್‌ಕಾಷ್‌ಸಿಂಗ್ ಎಂಬಷ್ಟು ಉದ್ದ ಹೆಸರಿನ ವ್ಯಕ್ತಿ ಎದುರಾಳಿಯಾದಲ್ಲಿ ನಾವು 'ಓಹೋ! ಇನ್ನು ನಮ್ಮಾಟ ಕಟ್ಟಿಡಬೇಕು! ತಲೆ ತಗ್ಗಿಸಿ ಬದುಕಬೇಕು! ಎಂದು ತೀರ್ಮಾನಿಸಿಯೇ ಬಿಡುತ್ತೇವೆ. ಸಿಟಿ XI ಎದುರಿಸಿದ ಸಮಸ್ಯೆ ಇದೆ. ಯಾವ ಲೆಕ್ಚರರನ್ನು ಹೇಗೆ ಗೋಳು ಹೊಯ್ದುಕೊಳ್ಳಬೇಕು; ಪುಲ್ ಓವರ್ ಯಾವ ಬಣ್ಣದ್ದಿರಬೇಕು; ಸಿಟಿ ಬಸ್ ಸ್ಟಾಪಿಗೆ ಎಷ್ಟು ಹೊತ್ತಿಗೆ ಹೋಗಿ ಎಷ್ಟು ಹೊತ್ತು ಕಾಯಬೇಕು, ಟೀ ಪಾರ್ಟಿಯಲ್ಲಿ ಗೋಡಂಬಿ ತಟ್ಟೆಯನ್ನು ಖಾಲೀ ಮಾಡಬೇಕೇ ಬೇಡವೇ, ಸ್ಕ್ವೇರ್ ಕಟ್ ಹುಕ್ ಇತ್ಯಾದಿಗಳನ್ನೂ, ಗೂಗ್ಲಿ ಸೀಮರುಗಳನ್ನು ಹೇಗೆ execute ಮಾಡಿದರೆ ನೋಡಲು ಅಂದ. ಇತ್ಯಾದಿಗಳೇ ಆ ಹುಡುಗರ ಸಮಸ್ಯೆಗಳು. ಅಲ್ಲದೆ ವೆಂಕಟ ನರಸಿಂಹ, ಬಾಲಸುಬ್ಬಕೃಷ್ಣ ಎನ್ನುವಂತಹ ಹೆಸರುಗಳ ಭಾರ ಬೇರೆ.

ಮಫ್ಯೂಸಿಲ್ ಇಲೆವೆನ್ನಿನವರಿಗೆ ಬೆಂಗಳೂರಿಗೆ ಹೋದುದೇ ಒಂದು ಛಾನ್ಸ್! ಬೆಂಗಳೂರಿನವರನ್ನು ಗೆಲ್ಲುವುದು! ಅದು ಕನಸು ಮನಸಿನಲ್ಲೂ ಇಲ್ಲ. ಬೇಕಾಗಿಯೂ ಇಲ್ಲ. ಸಾಧ್ಯವೂ ಅಲ್ಲ ಮೂರನೇ ದಿನ ಹನ್ನೊಂದೂವರೆಗೆ ಸೋತರೆ ಮಧ್ಯಾಹ್ನ ಖುಷಿಯಾಗಿ ಅಲಂಕಾರ್, ಲಿಬರ್ಟಿ!

ಇಂಡಸ್ಟ್ರೀಸ್ ಇಲೆವೆನ್ನಿನವರ ಮನೋಭಾವ ಬೇರೆ. ಬ್ಲಾಸ್ಟ್ ಫರ್ನೇಸಿನಿಂದ ಕಬ್ಬಿಣದ ಕುದಿವ ದ್ರವ ಹೊರಚೆಲ್ಲಿದರೆ, ತಯಾರು ಮಾಡಿಟ್ಟ ಎಂಜಿನ್ ಏಕ್ ದಂ ಸ್ಟಾರ್ಟ್ ಆಗಿ ಅಸೆಂಬ್ಲಿ ಲೈನಿನಲ್ಲೇ ಟಾಪ್ ಸ್ಪೀಡ್ ಹಿಟ್ಟೆದರೆ, ಎನ್ನುವಂತಹ ಸಮಸ್ಯೆಗಳನ್ನವರು ಎದುರಿಸಬೇಕು. ಯರ್‍ರಾ ಬಿರ್‍ರಿಯಾದ ಮೆಟಲ್ ಶೀಟು, ಕೊಡತಿಯಿಂದ ಹೊಡೆದರೆ ನಿನ್ನ ಮುಸುಡಿಗೇ ಹಿಂತಿರುಗುವೆನೆಂದು ಹೇಳುತ್ತಿದೆ; ಅದಕ್ಕೆ ಬಾರಿಸುವ ವಿಧಾನವನ್ನವರು ಕಂಡುಹಿಡಿದಿದ್ದಾರೆ. ಮರುದಿನ ಬೆಳಗ್ಗೆ ಮಿಲ್ಲಿಗೆ ಹೋದಾಗ ಲಾಕೌಟ್ ದೊಂಬಿ ನಡೆದರೆ ಯಾವ ಪಟ್ಟುಗಳಿಂದ ದುಷ್ಮನ್ನುಗಳನ್ನು ಖತಂ ಮಾಡಬೇಕೆಂದು ಅವರು ಬಲ್ಲರು. ಮೇಘನಾದ ಖಿಲಜಿಯಾ ಮ್ಯಾಚಿನ ಹಿಂದಿನ ದಿನ ಕಾಳೀ ದೇವಾಲಯದಲ್ಲಿ 'ಹೇ ಭದ್ರಕಾಳಿ, ನಾಳಿನ ದಿನ ಮ್ಯಾಚಿನಲ್ಲಿ ಎಂಟು ವಿಕೆಟ್ಟುಗಳನ್ನಾಗಲಿ ಎದುರಾಳಿಗಳನ್ನಾಗಲೀ ಬಲಿ ತೆಗೆದುಕೊಳ್ಳುವಂತೆ ಮಾಡು' ಎಂದು ಪ್ರಾರ್ಥಿಸಿದ್ದನೆಂದು ವದಂತಿ ಹಬ್ಬಿದರೆ, ಐಸ್‌ಕ್ರೀಂ ಕೌಂಟರಿನಲ್ಲಿ ಪಂಟು ಬಡಿಯುವುದರಲ್ಲಿ ನಿಷ್ಣಾತನಾದ ನಗರದ ಬಚ್ಚನ ಮನೋಭಾವ ಹೇಗಿರಬಹುದು? ಅಂಪೈರುಗಳಿಗೆ ಸೀ ಸೀ ಹೊಡೆಯುವೆವೆಂದುಕೊಂಡಿದ್ದರೆ, ಅಲ್ಲಿಯೂ ಭ್ರಮ ನಿರಸನ. ಪರ್ಸಾನೆಲ್ ಮ್ಯಾನೇಜರುಗಳ ತಲೆಗಳನ್ನೇ ಹಿಂದಿರುಗಿಸಿ ದಿಗ್ಭ್ರಮೆ ಹಿಡಿಸಿದ ಜನಕ್ಕೆ ಅಂಪೈರುಗಳು ಯಾವ ಮಹಾ!

ಹೀಗಾಗಿ 50, 60 ಹೊಡೆದ ಸಿಟಿ ಹುಡುಗರು ಏಕ್ ದಂ ಔಟಾದುದಾಗಲೀ, ಪಟಪಟನೆ ವಿಕೆಟ್ಟುಗಳುರುಳುತ್ತಿದ್ದಾಗ ಬಂದ ಸುಬಾಹು ಝುಂ ಝುಂ ವಾಲಾ 60, 70 ಹೊಡೆದು ವೆಂಕಟ, ಕೃಷ್ಣ, ಸುಬ್ಬ, ನರಸಿಂಹನ್ ಮೊದಲಾದವರ ಮುಖದಲ್ಲಿ ನೀರಿಳಿಸಿದುದಾಗಲೀ ದೊಡ್ಡದಲ್ಲ.

ನಾವು, ಇತರರೊಡನೆ ಕಳೆದ ಹಲವಾರು ವರ್ಷಗಳಿಂದಲೂ ಹೇಳುತ್ತಾ ಬಂದಿರುವಂತೆ ನಮ್ಮ ರಾಜ್ಯದಲ್ಲಾಗಲೀ, ನಮ್ಮ ರಾಷ್ಟ್ರದಲ್ಲಾಗಲೀ ಕ್ರಿಕೆಟ್ ಕ್ರೀಡಾಪಟುಗಳಿಗೆ ಬರಗಾಲವಿಲ್ಲ. ಮಟ್ಟ ಉನ್ನತವಾಗಿಯೇ ಇದೆ. ಆದರೂ ಮೊನ್ನೆ ನಮ್ಮ ಹುಡುಗರು ತಮಗೆ ಎಲ್ಲಾ ವಿಧದಲ್ಲಿಯೂ ಸ್ವಲ್ಪ ಕೆಳಮಟ್ಟದ್ದಾಗ ನೆರೆರಾಜ್ಯದ ಟೀಮಿಗೆ ಫಸ್ಟ್ ಇನಿಂಗ್ಸ್ ಲೀಡ್ ಕೊಟ್ಟುದು ಎಷ್ಟು ಶೋಚನೀಯ. ಮಿಲ್ಖಾಸಿಂಗ್ ಹಿಂದೆಂದೋ ಸೆಂಚುರಿ ಹೊಡೆಯುತ್ತಿದ್ದನೆಂಬ ಕಾರಣಕ್ಕಾಗಿ ಅತನ ನಮ್ಮೂರಿಗೂ ಸೆಂಚುರಿ ಹೊಡೆಯಲು ಬಿಡಬೇಕೇ? ಅಥವಾ ಅವನ ಹೆಸರು ನೋಡಿ ಹ್ಯಾಮರ್ ಬೀಟ್ಸ್ ಡಿಪಾರ್ಟ್‌ಮೆಂಟಿನ ಹರ್ಜಿಂದರ್ ಸಿಂಗ್ ಎಂದುಕೊಂಡರೋ!

ನಮ್ಮ ಮುಗಿಲು ಹಳ್ಳಿಯಲ್ಲಿ ಇಂದು ಹಾಗೆಯೇ. ಆಟಗಾರರಿಗೆ ಕೊರತೆ ಇಲ್ಲ. ಆದರೆ ಅವರಿಗೆ ನೈಚ್ಯ ಮನೋಭಾವ. ಎಂಜಿನಿಯರಿಂಗ್ ಕಾಲೇಜ್ ಟೀಮಿನಲ್ಲಿ, ಏಳು ವರ್ಷಗಳ ಹಿಂದೆ ಎಂ. ಜಿ. ಎಸ್ ಫೈನಲ್ಸ್‌ನಲ್ಲಿ ಡಬಲ್ ಸೆಂಚುರಿ ಹೊಡೆದು, ಆಚಾರ್ಯ ಷೀಲ್ಡ್ ಲೀಗಿನಲ್ಲಿ ಸಿಂಗಲ್ ಸೆಂಚುರಿ ಹೊಡೆಯುತ್ತಿದ್ದು ಇತ್ತೀಚಿಗೆ ಮಿರ್ಜಾ ಷೀಲ್ಡ್ ಸೀನಿಯರ್ ಲೀಗಿನಲ್ಲಿ a faultless 14 ಹೊಡೆದ ಇಂಥಾವನ ತಮ್ಮ ಇದ್ದಾನೆ ಎಂದು ಸುದ್ದಿ ತಿಳಿದ ಕೂಡಲೇ, ಮುಂದಿನ ಎಂ. ಜಿ. ಮ್ಯಾಚಿನಲ್ಲಿ ಅವನಿಗೆ ಒಂದು ಸೆಂಚುರಿ ಕೊಡಲೇಬೇಕು. ಎಂದು ತೀರ್ಮಾನಿಸಿ ಬಿಡುತ್ತಾರೆ.

ಅಂದಹಾಗೆ ನಮ್ಮೂರಿನ ಹುಡುಗರು ವೆಸ್ಟಿಂಡೀಸಿನ ಪಕ್ಷಪಾತಿಗಳು. ಅವರು ವರ್ಣ ವಿಭೇದ ನೀತಿಯ ವಾದಕ್ಕೆ ವೆಸ್ಟಿಂಡೀಸರು ಇಂಗ್ಲೀಷರಿಗೆ ಚಳ್ಳೇಹಣ್ಣು ತಿನ್ನಿಸಿದ್ದೇ ಸರಿಯಾದ ಉತ್ತರವೆಂದು ಹೇಳುತ್ತಾ ಸ್ವಂತ ಖರ್ಚಿನಲ್ಲಿ ಟೀ ಪಾರ್ಟಿಗಳನ್ನು ಕೊಡುತ್ತಿದ್ದಾರೆ. ಅದೇ ಕಾಲದಲ್ಲಿ ನಮ್ಮೂರಿನ ಕ್ರಿಕೆಟ್ ಮಟ್ಟವನ್ನು ಎತ್ತರಿಸಿ ಕೊನೆಯ ಪಕ್ಷ ಇನ್ನೂರು ಅಡಿಗಳಿಗಾದರೂ ತರಬೇಕೆಂದು ಆಲೋಚಿಸಿದ್ದಾರೆ.

ಕಬ್ಬಿಣ ನೇಗಿಲಿನಿಂದ ಮಾಗಿ ಹೊಡೆಯುವ, ಕ್ವಿಂಟಲ್ ತೂಕದ ಚೀಲಗಳನ್ನು ಅನಾಯಾಸವಾಗಿ ಲಾರಿಯ ಮೇಲಕ್ಕೊಗೆದು ಬಿಡುವ ನಮ್ಮ ಹೈಕಳ ಕೈಗಳಿಗೆ ಅಸೋಸಿಯೇರ್ಷ ಕ್ರಿಕೆಟ್ಟಿನಲ್ಲಿ ಉಜ್ವಲ ಭವಿತವ್ಯವಿದೆ ಆದರೆ ಅವರು ಮಸಾಲೆ ದೋಸೆ, ಕಾಫಿ; ಮಂಡಕ್ಕಿ ಖಾರ, ವಡೆ ಮೆಣ್ಸಿನ್ಕಾಯಿ; ಇತ್ಯಾದಿಗಳನ್ನು ತಿನ್ನುತ್ತಿರುವುದನ್ನು ಬಿಟ್ಟು, ಮೀಸೆಗಡ್ಡಗಳನ್ನು ಬೆಳೆಸಿ ತಲೆ ಕೆದರಿಕೊಂಡು ಫೀಲ್ಡಿಗಿಳಿದು ಅಂಗಿಯ ತೋಳು ಮೇಲೇರಿಸಬೇಕು.

—ಅ. ರಾ. ಸೇ.

ಆಶ್ಚರ್ಯಕರವಾದ ಸುದ್ದಿಯೊಂದು ವರದಿಯಾಗಿದೆ.

—ಕಲ್ಲಿದ್ದಲನ್ನು ಹೊತ್ತಿದ್ದ ಹಡಗೊಂದು ಸಮುದ್ರದಲ್ಲಿ ಬೆಂಕಿ ಹತ್ತಿಕೊಂಡು ಉರಿದು ಹೋಯಿತಂತೆ.

—ಉರಿಯೋ ಇದ್ದಿಲು ಇದೆ, ಅಂದರೆ ಆಶ್ಚರ್ಯವಲ್ಲವೇ.

* * * *

ಹೌಸ್ ಸರ್ಜನ್ನರುಗಳು ಸಂಪು ಹೂಡುವ ಬೆದರಿಕೆ ಹಾಕಿದರು

—ಇನ್ನು ಮುಂದೆ ರೋಗಿಗಳು ಸಂಪುಹೂಡುವ ಬೆದರಿಕೆ ಹಾಕಬೇಕು

ಹಿಡಿತದಲ್ಲಿರಬೇಡಿ

ಜಾಣ ಹುಡುಗ ಹುಡುಗಿ. ಚೆನ್ನಾಗಿ ಓದಿ, ಮೊದಲನೆ ಶ್ರೇಣಿಯಲ್ಲಿ ಪ್ಯಾಸು ಮಾಡಿ, ಅಮೇರಿಕಾಕ್ಕೆ ಪ್ರೌಢ ವ್ಯಾಸಂಗಕ್ಕೆ ಹೋದರು. ಇಬ್ಬರೂ ಡಾಕ್ಟರೇಟ್ ಪಡೆದರು. ಆ ಮೇಲೆ ಮದುವೆಯಾಗಿ ಊರಿಗೆ ಹಿಂತಿರುಗಿದರು

ಬೊಂಬಾಯಿನಲ್ಲಿ ಇಬ್ಬರಿಗೂ ಕೆಲಸ ಸಿಕ್ಕಿತು ಲಕ್ಷಣವಾದ ಮನೆ ಮಾಡಿದರು. ಕೈತುಂಬ ಸಂಬಳ ಕೊಡ್ತೀವಿ,ಅಡಿಗೆಯುವವನನ್ನು ಕಳುಹಿಸಿಕೊಡಿ ಅಂತ ಇಬ್ಬರೂ ತಂತಮ್ಮ ತಂದೆ ತಾಯಿಗಳಿಗೆ ಪತ್ರ ಬರೆದರು. ಅಡಿಗೆಯವನು ಸಿಗಲಿಲ್ಲ. ಹೋಟೆಲಿಗೆ ಹೋಗಿ ಉಂಡು ತಿರುಗಿ ಮಲಗುವುದಕ್ಕೆ ಮನೆಗೆ ಬರೋದು ಇಬ್ಬರಿಗೂ ಬೇಜಾರುಮಾಡಿತು. ದಿನ ಪತ್ರಿಕೆಗಳಲ್ಲಿ ಜಾಹೀರಾತು ಹೊರಡಿಸಿದರು.

ಅರವತ್ತು ವರ್ಷದ ಮುದುಕ ಮೊದಲು ಬಂದ. ಅಡಿಗೆ ಮನೆ ವಾರಣವಾಗಿದೆ. ಆದರೆ, ಇಬ್ಬರಿರೋ ಮನೇಲಿ ಅಡಿಗೆಮಾಡಿದರೆ, ಸಂಬಳವಷ್ಟೇ ಸಂಪಾದನೆಯಾಗುತ್ತೆ ಬೇಡ ಅಂತ ಹೇಳಿ ಹೊರಟುಹೋದ.

ಎರಡನೆಯಾಕೆ ಬಂದಳು ಮೂವತ್ತರ ಪ್ರಾಯ ಮೀರಿತ್ತಾದರೂ ಕಣ್ಣು ಹೊಳಪಾಗಿತ್ತು. ಎಷ್ಟು ಮಕ್ಕಳಮ್ಮಾ ಅಂತ ಹೆಂಡತಿ ಕೇಳಿದಳು, ನಾನು ಹುಷಾರು ಮಕ್ಕಳಾಗೋತಂಕ ಕಾಯುಲ್ಲ ಅಂತ ಆಕೆ ಹೇಳಿದಳು. ಈ ಚಾಣಾಕ್ಷಿ ಅಡಿಗೆಗೆ ಅಂತ ಕಾಲಿಟ್ಟರೆ, ನಾನು ಮನೆ ಬಿಡಬೇಕಾಗುತ್ತೆ ಅಂತ ಕಾಣುತ್ತೆ ಅಂತ ಹೆಂಡತಿಗೆ ತೋಚಿತು. ಬಂದವಳು ಹೊರಟುಹೋದಳು

ಮೂರನೆಯ ಅಡಿಗೆಯುವಳು ಸುಮಾರು ೫೦ವರ್ಷದ ಪ್ರಾಯದವಳು.ಹೆಚ್ಚು ದುಡಿಯುವ ಸಾಮರ್ಥ್ಯ ಇದ್ದ ಹಾಗಿರಲಿಲ್ಲ ಆದರೂ ಪಳಗಿದ ಕೈ. ರುಚಿಯಾಗಿ ವಿಧವಿಧವಾಗಿ ಅಡಿಗೆ ಮಾಡಿ ಹಾಕ್ತಾಳೆ ಅನ್ನೋ ಭರವಸೆ ಇತ್ತು. ಇವಳನ್ನು ಹೇಗಾದರೂ ಮಾಡಿ ಒಪ್ಪಿಸಿ ಇರಿಸಿಕೊಳ್ಳಬೇಕು ಅಂತ, ಹೆಂಡತಿ ಹೇಳಿದಳು. ನಮ್ಮನೇಲಿ ಮಕ್ಕಳ ಕಾಟ ಇಲ್ಲಮ್ಮಾ! ಎರಡು ಹೊತ್ತು ಅಡಿಗೆ, ತಿಂಡಿ ಮಾಡಿದರೆ ಕೆಲಸ ಮುಗೀತು" ಅಂತ

"ಇದೇನೂ ಅಂದ್ರೆ; ಹೀಗಂತೀರಿ! ಮಕ್ಕಳು ಮರಿ ಅಂತ ಅಂದ್ರೆ ತುಂಬಾ ಇಷ್ಟ ನನಗೆ. ನನಗೋಸ್ಕರ ಹಿಡಿತದಲ್ಲಿರಬೇಡಿ" ಅಂತ ಧೈರ್ಯ ಕೊಟ್ಟು ಕೆಲಸಕ್ಕೆ ಸೇರಿಕೊಂಡಳಂತೆ.

ನಮ್ಮೂರಿನ ಅರಿಭಯಂಕರರು

ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ಹೆಣ್ಣು ಮಕ್ಕಳ ಪಾತ್ರ ಬಲು ದೊಡ್ಡದೆಂದರೆ ಯಾರು ಅಲ್ಲ ಎನ್ನುತ್ತಾರೆ !

ರಾಷ್ಟ್ರ ಉಳಿಯಬೇಕಾದರೆ ಹೆಂಗಸರು ಚಿನ್ನ ಬಣ್ಣದ ಮೋಹ ಬಿಡಬೇಕು ಎಂದರು ಮೊರಾರ್ಜಿ. ಸರಿ ಹೆಣ್ಣುಮಕ್ಕಳೆಲ್ಲ ಆಭರಣಗಳನ್ನು ತೆಗೆದು ಪೆಟ್ಟಿಗೆಯೊಳಗಿಟ್ಟುಬಿಟ್ಟರು

ಕುಟುಂಬದಲ್ಲಿ ಮಿತವ್ಯಯವನ್ನು ಅಭ್ಯಾಸಮಾಡಬೇಕು; ಆ ವಿಷಯದಲ್ಲಿ ಹೆಂಗಸರೇ ಮುಂದಾಗಬೇಕು ಎಂದರು ಬಲ್ಲವರು. ಸರಿ ಗಂಡನ ಸಂಬಳ ಬಂದ ಕೂಡಲೆ ವಸೂಲುಮಾಡಿ ಗಂಡನಿಗೆ allowance ಕೊಡುತ್ತಿದ್ದ ಮಹಿಳಾಮಣಿಗಳೆಲ್ಲ ತಮ್ಮ ಮುಷ್ಟಿ ಬಿಗಿಹಿಡಿದು, ಗಂಡನಿಗೆ ಕೊಡುವ ಹಣದಲ್ಲಿ ಮಿಗಿಸಿದರು.

ಲಲನೆಯರೆಲ್ಲ ಸೈನಿಕ ಶಿಕ್ಷಣೆಗೆ ಮುಂದಾಗಬೇಕು ಎಂದಾಗ ಅವರು ಕೋವಿ ಹಿಡಿದು ಫೋಟೋ ತೆಗೆಸಿಕೊಂಡರು.

ಅಷ್ಟೇ ಅಲ್ಲ. ರೋಗಿಗಳ ಶುಶ್ರೂಷೆಯಲ್ಲಿಯೂ ಮಹಿಳೆಯರು ಪ್ರವೀಣೆಯರಾಗಬೇಕು, ಅದು ರಾಷ್ಟ್ರದ ರಕ್ಷಣೆಗೆ ಅವಶ್ಯ ಎಂದು ತಿಳಿದವರು ಹೇಳಿದ್ದರಿಂದ ನಮ್ಮೂರಿನಲ್ಲಿ ಒಂದು ನರ್ಸಿಂಗ್ ತರಬೇತಿ ಕೇಂದ್ರ ಪ್ರಾರಂಭವಾಯಿತು. ಹೆಮ್ಮಕ್ಕಳು ನಾಮುಂದು ತಾಮುಂದು ಎಂದು ಮುಂದಾದರು ತರಬೇತಿಗೆ ಮಾತ್ರವಲ್ಲ, ರಾಷ್ಟ್ರದ ರಕ್ಷಣೆಯಲ್ಲಿ ತಾವು ಯಾರಿಗೂ ಹಿಂದಲ್ಲ ಎಂದು ತೋರಿಸಿಕೊಟ್ಟರು; ತರಬೇತಿ ಕೇಂದ್ರ ಪ್ರಾರಂಭವಾದ ಎಂಟೇ ದಿನಗಳಲ್ಲಿ.

ಮೊತ್ತ ಮೊದಲು ಪ್ರಥಮ ಚಿಕಿತ್ಸೆಯ ಕ್ರಮಗಳನ್ನು ಹೇಳಿಕೊಡತೊಡಗಿದರು. ಬ್ಯಾಂಡೇಜ್ ಕಟ್ಟುವುದು ಹೇಗೆ, ರೋಗಿಗಳನ್ನು ಒಂದೆಡೆಯಿಂದ ಒಂದೆಡೆಗೆ ಸಾಗಿಸುವುದು ಹೇಗೆ ಎಂಬುದನ್ನೆಲ್ಲ ವಿವರಿಸುತ್ತಿದ್ದರು. ಮೇಸ್ಟರ ಮಗಳು ಅಪ್ಪಚ್ಚುವಿನ ಕಾಲಿಗೆ ಹೆಣ್ಣುಮಕ್ಕಳೆಲ್ಲ ಬ್ಯಾಂಡೇಜ್ ಸುತ್ತಿದ್ದೇ ಸುತ್ತಿದ್ದು ! ಆ ಮೇಲೆ ಎತ್ತಿ ಬೇರೆ ಕಡೆಗೆ ಸಾಗಿಸಿ ಮಲಗಿಸೋದು ಹೇಗೆ ಎಂದು ತೋರಿಸುವುದಕ್ಕಾಗಿ ಅಪ್ಪಚ್ಚುವನ್ನು ಇಬ್ಬಿಬ್ಬರು ಹುಡುಗಿಯರು ಮೇಲೆತ್ತಿದರು. ಸರದಿ ಪ್ರಕಾರ ಆಸ್ಪತ್ರೆ ಡಾಕ್ಟರ ಮಕ್ಕಳು ಕಮಲೂ ವಿಮಲೂನೂ ಎತ್ತಿದರು. ಭರ್ತಿ ಐದು ಮುಕ್ಕಾಲಡಿ ಜೀವ ಇಬ್ಬರದೂ. "ನೀವಿಬ್ಬರೂ ಈ ನರ್ಸಿಂಗ್‌ಗೆ ಯಾತಕ್ಕರೆ,

ಸುಮ್ಮನೆ ಮೆಶೀನ್‌ಗನ್ ಹಿಡಿದು ನುಗ್ಗಬಾರದೆ, ಒಳ್ಳೇ ಟ್ಯಾಂಕ್ ನುಗ್ಗಿದ ಹಾಗಿರುತ್ತೆ" ಎಂದು ಹುಡುಗಿಯರೆಲ್ಲ ಗೋಳು ಹುಯ್ಯುಕೊಳ್ಳುತ್ತಿದ್ದರು ಅವರನ್ನು. ಹೇಗೋ ಸೊಂಟ ಬಗ್ಗಿಸಿ, ಅಪ್ಪಚ್ಚುವನ್ನು ಮೇಲಕ್ಕೆತ್ತಿದರು ಸರಕ್ಕೆಂತ. ಆಗ ಹುಡುಗಿಯರ ಗುಂಪಿನಲ್ಲಿ ಯಾರಿಗೆ ದುರ್ಬುದ್ಧಿ ಬಂತೋ, ಒಂದು ಜಿರಳೆ ಮರಿಯನ್ನು ಕಮಲೂ ಮೈಮೇಲೆ ಕೊಡವಿದರು ಯಾರೋ ಒಬ್ಬರು. ಆಕೆ 'ಬ್ಯಾ' ಎಂದು ಅರಚಿ ಅಪ್ಪಚ್ಚುವನ್ನು ಬಿಟ್ಟು ಹಾರಿದಳು. ವಿಮಲೂ ಕೂಡ ಗಾಬರಿಯಿಂದ ಅರಚಿ ನೆಗೆದಳು. ಅಪ್ಪಚ್ಚು ದೊಪ್ಪೆಂದು ನೆಲದ ಮೇಲೆ. ಆ ಮೇಲೆ ನಡೆದದ್ದು ದೇವರಿಗೇ ಪ್ರೀತಿ.

ಅಪ್ಪಚ್ಚು 'ಅಯ್ಯಯ್ಯೋ' ಎಂದು ನರಳಿದಳು. ಕಲಿಸಿಸಿಕೊಡುತ್ತಿದ್ದ ಹಿರಿ ನರಸಮ್ಮ ಎಲುಬು ಮುರಿದು ಹೋಯಿತೋ ಏನೋ ಎಂದಳು. ಸ್ಟ್ರೆಚರ್ ತನ್ನಿರೇ ಎಂದು ಕೂಗಿದಳು. ಹುಡುಗಿಯರೆಲ್ಲ ಅಡ್ಡಾದಿಡ್ಡ ಓಡಾಡಿ ಸ್ಟ್ರೆಚರ್ ತಂದರು ಗಡಿಬಿಡಿಯಲ್ಲಿ ಮಂಚವಿರುವ ಪಕ್ಕದ ಕೋಣೆಗೆ ಸಾಗಿಸಲು ಸ್ಟ್ರೆಚರ್ ಮೇಲೆ ಮಲಗಿಸಿದರು ಅಪ್ಪಚ್ಚುವನ್ನು. ಆಕೆ ನೋವಿನಿಂದ ನರಳುತ್ತಾ ಇದ್ದಂತೆ ನಾಲ್ಕೈದು ಮಂದಿ ಸ್ಟ್ರೆಚರಿಗೆ ಕೈಕೊಟ್ಟು ಎತ್ತಿ ಕೋಣೆಯ ಕಡೆಗೆ ನುಗ್ಗಿದರು. ಮೊದಲೇ ಕಂಗಾಲಾಗಿದ್ದ ಅಪ್ಪಚ್ಚುವಿನ ತಲೆ ಅವರ ಗಡಿಬಿಡಿಯಲ್ಲಿ, ಬಾಗಿಲಿಗೆ ಬಡಿಯಿತು. ಅಪ್ಪಚ್ಚು ಅಯ್ಯೋ ಎಂದು ಹೃದಯವಿದ್ರಾವಕವಾಗಿ ಒಮ್ಮೆ ಚೀರಿದ್ದು ಗೊತ್ತು. ಸ್ಮೃತಿ ತಪ್ಪಿಹೋಯಿತು. ನಾಲ್ಕಾರು ಹುಡುಗಿಯರು ಭಯದಿಂದ ಚೀರಿದರು.

ಆಸ್ಪತ್ರೆಗೆ ಸಾಗಿಸೋದೇ ಲೇಸು ಎಂದು ಹಿರಿ ನರಸಮ್ಮ ಅಂಬುಲೆನ್ಸ್ ಬರಲಿ ಎಂದಳು. ಅಂಬೂಲೆನ್ಸ್ ಯಾಕೆ ನನ್ನ ಕಾರಿದೆಯಲ್ಲ ಎಂದು ಡಿ. ಪಿ. ಕಮಿಷನರ್ ಪುತ್ರಿ ಚಂಚಲಕುಮಾರಿ ಸ್ವತಃ ಕಾರು ತಿರುಗಿಸಿ ತಂದೇಬಿಟ್ಟಳು. ಅಪ್ಪಚ್ಚುವನ್ನು ಕಾರಿನಲ್ಲಿ ತುಂಬಿದರು, ಚಂಚಲ ಕುಮಾರಿ ಒಂದೇ ಸವನೆ ಎದೆ ಏರಿಳಿಯುತ್ತಿದ್ದಂತೆ ಎಕ್ಸಿಲರೇಟರ್ ಒತ್ತಿದಳು. ಕಾರು ರಾಕೆಟ್‌ನಂತೆ ಹೊರಟು ಹೋಯಿತು. ಐವತ್ತು ಗಜ ಹೋಗುವಷ್ಟರಲ್ಲಿ ಕಾಣಿಸಿತು ಮತ್ತೊಂದು ನಮ್ಮೂರಿನ ಸಿಟಿ ಬಸ್. ಅಡ್ಡಾದಿಡ್ಡಿ ಸುಳಿಯುತ್ತ ಬರುವ ಅದು ಚಂಚಲ ಕುಮಾರಿಯ ಕಾರನ್ನು ತಬ್ಬಿದ್ದೊಂದು ಗೊತ್ತು. ಕುಮಾರಿ ಹೇಗೋ ಕಾರಿಂದ ನೆಗೆದು ಬದುಕಿಕೊಂಡಳು. ಆದರೆ ಅಪ್ಪಚ್ಚುವಿಗೆ ಇನ್ನೂ ಒಂದು ಪೆಟ್ಟು ಬಿತ್ತು.

ನರ್ಸಿಂಗ್ ತರಬೇತಿ ಪೂರ್ತಿ ಮುಗಿಯುವಷ್ಟರಲ್ಲಿ ನಮ್ಮೂರಿನ ಹೆಮ್ಮಕ್ಕಳು ಚೀಣೀಯರನ್ನು ನಿರ್ನಾಮಗೊಳಿಸುವಷ್ಟು ಪ್ರವೀಣೆಯರಾಗಿರುತ್ತಾರೆ ಎಂದು ಆಡಿಕೊಳ್ಳುತ್ತಿದ್ದಾರೆ ನಮ್ಮೂರಿನ ಜನ.

—ರಾವಿ.

''ಬಡ ಅತ್ತೆಮ್ಮನಿಗೆ ಇಜ್ಜೋಡಿ ದೀಪಾವಳಿ''

" ಹಳೇ ಕಾಲದ ಮುದುಕೀಮ್ಮಾ ನಾನು, ಅಳಿಯಂದಿರ ಎದುರಿಗೆ ನಿಂತು ಕೊಂಡು ಧೈರ್ಯವಾಗಿ ದೀಪಾವಳಿ ಹಬ್ಬಕ್ಕೆ ಖಂಡಿತ ನೀವು ಬರಬೇಕು ಅಂತ ಹೇಗೇ ಕರೆಯೋದು; ಆದರೂ ಇದ್ದುದರಲ್ಲಿ ಧೈರ್ಯ ತೊಗೊಂಡು ಹಬ್ಬಕ್ಕೆ ಖಂಡಿತ ವಾಗಿ ಬನ್ನೀಪ್ಪ. ರಜಗಿಜ ಸಿಕ್ಕಲಿಲ್ಲ ಅಂತ ನೆಪ ಹುಡಕಬೇಡಿ, ಅಂತ ಬಾಗಿಲ ಹಿಂದೆ ನಿಂತುಕೊಂಡೇ ಅವರಿಗೆ ಚೆನ್ನಾಗಿ ಕೇಳಿಸೋ ಹಾಗೆ ಹೇಳಿದೆ. ಪ್ರಯತ್ನ ಮಾಡ್ತೀನಿ ಅಂತ ಅವರೂ ಉತ್ತರ ಕೊಟ್ಟರು. ನಂಗೇನೋ ಅಷ್ಟು ಮಾತಾಡಿದ್ದಕ್ಕೇ ಮೈಯೆಲ್ಲಾ ಬೆವತು ಹೋಗಿತ್ತು" ಎಂದುವ ಪುತ್ತೈದಮ್ಮನವರು ತಮ್ಮ ಮಗಳಿಗೆ ಜುಲೈ ತಿಂಗಳಿನಲ್ಲಿ ಹೇಳಿದರು. ಹಾಗೆ ಹೇಳುತ್ತಾ ಲಕ್ಷ್ಮೀ ನಿನ್ನ ಗಂಡನಿಗೆ ಕಾಗದ ಬರೆಯೋವಾಗ ಹಬ್ಬಕ್ಕೆ ಬಂದೇ ಬರಬೇಕು ಎಂದು ಬರೆಯೋ ಎಂದು ಕುಮ್ಮಕ್ಕನ್ನು ಕೊಡುತ್ತಾ ಇದ್ದರು.

ಅಕ್ಟೋಬರ್ ಹತ್ತನೆ ತಾರೀಖು ಮಗಳಿಗೆ ಕಾಗದ ಬಂತು, ಅಂಚೆಯವ ನಿಂದ ಕಿತ್ತುಕೊಂಡು ಪುಣಕ್ಕಂತ ತನ್ನ ಕೋಣೆಗೆ ಹೋಗಿ ಬಾಗಿಲು ಬಿಗಿದುಕೊಂಡು ಕಾಗದ ಓದುಕ್ಕೆ ಶುರು ಮಾಡಿದಳು ಲಕ್ಷ್ಮಿ. ಗಂಡ ಬಂದರೆ ಅವನ ಜತೆ ಗುಟ್ಟು ಮಾತಾಡೋದು, ಇತ್ಯಾದಿ ಬೇಕಾದಷ್ಟಿರುತ್ತೆ. ದಿಟ. ಆದರೆ ಗಂಡನ ಕಾಗದ ಬಂದರೆ ಅದನ್ನು ಓದುವುದಕ್ಕೂ ಕೋಣೆಬಾಗಿಲು ಹಾಕಿಕೊಳ್ಳಬೇಕೇ? ಅದನ್ನೂ ಗುಟ್ಟಾಗಿ ಮಾಡಬೇಕೇ" ಹೀಗೆ ಮಾಡುವುದು ತಾನೇ ಯಾವ ನ್ಯಾಯ? ಆದರೆ ಇಂತಹ ವಿಷಯಗಳಲ್ಲಿ ನ್ಯಾಯ, ಸಕಾರಣ, ಒಪ್ಪು ತಪ್ಪು ಇವೆಲ್ಲವೂ ಗಾಳೀಲಿ ಹಾರಿಹೋಗುತ್ತಲ್ಲ; ಅದು ಎಷ್ಟು ದೊಡ್ಡ ಕಾಗದವೋ, ಅಥವಾ ಪುಟಾಣಿ ಕಾದಂ ಬರೀನೇ ಲಕ್ಷ್ಮಿ ಗಂಡ ಬರೆದಿದ್ದನೋ ಅಥವಾ ಓದಿದ್ದನ್ನೇ ಹತ್ತು ಹತ್ತು ಬಾರಿ ಲಕ್ಷ್ಮಿ ಓದಿ ಓದಿ ಲೊಚಗುಟ್ಟಿದಳೋ, ದೇವರೇ ಬಲ್ಲ. ಆದರೆ ಕಾಗದ ಓದಿ ರವಿಕೇಲ್ಲಿ ಮುಚ್ಚಿಟ್ಟು ಸೆರಗು ಹೊದ್ದುಕೊಂಡು, ಕೋಣೆಬಾಗಿಲು ತೆಗೆದು ಅಡಿಗೆ ಮನೆಗೆ ಬಂದಾಗ ಮುಕ್ಕಾಲು ಗಂಟೆಯು ಮೇಲಾಗಿತ್ತು.

" ಅಮ್ಮಾ! ಅಮ್ಮಾ! ಇವರು ಕಾಗದ ಬರೆದಿದ್ದಾರೆ ದೀಪಾವಳಿಗೆ ರಜಾ ಸಿಕ್ಕಿದೆಯಂತೆ. ದೀಪಾವಳಿ ಹಬ್ಬದ ಹೊತ್ತಿಗೆ ಬರ್ತಾರಂತೆ. ಕೆಲಸಕ್ಕೆ ನಾನಿರೋ ಡಾರ್ಜೀಲಿಗಿಂದ ನಿಮ್ಮೂರಿಗೆ ಮೂರು ದಿನದ ರೈಲು ಪ್ರಯಾಣ, ಮೈ ಕೈ ಎಲ್ಲಾ ಗುಜ್ಜು ಹೋಗಿರುತ್ತೆ. ನಿಮ್ಮನೆಗೆ ಬಂದಾಗ ಸರಿಯಾಗಿ ಎಣ್ಣೆ ಒತ್ತಿ ನೀರು ಹಾಕಿ, ತಂಪು ಮಾಡ್ತೀ ಅಂತ ಆಸೆ ಪಟ್ಟುಕೊಂಡಿದ್ದೇನೆ. ಅಂತ ಬರೆದಿದ್ದಾರೆ, ಎಣ್ಣೆ ಒತ್ತಿ ನೀರು ಹಾಕೋದು ಗೊತ್ತಮ್ಮ. ಆದರೆ ತಂಪು ಹೇಗೆ ಮಾಡೋದು ಎಂದು

ಲಕ್ಷ್ಮಿ ಅಮ್ಮನ್ನ ಕೇಳಿದಳು. ಅದಕ್ಕೇನೇ! ದೊಡ್ಡಪತ್ರೆ ಸೊಪ್ಪಿನ ತಂಬುಳಿಮಾಡಿ ಹಾಕ್ತೀನಿ. ಆಗ ತಂಪಾಗುತ್ತೆ. ರೈಲು ಪ್ರಯಾಣ, ಮೂರು ದಿನದ ಪ್ರಯಾಣ, ಕಣ್ಣು ಅಂಗೈ ಅಂಗಾಲೆಲ್ಲಾ ಉರಿದುಹೋಗುತ್ತೆ. ಉಷ್ಣಾಧಿಕ್ಯ ಆಗುತ್ತೆ. ತಂಬುಳಿ ತಿಂದರೆ ಉಷ್ಣ ಇಳಿದುಹೋಗುತ್ತೆ ಅಂತ ಅಮ್ಮ ಹೇಳಿದಳು.

"ಇಷ್ಟೇನೇ! ತಂಪುಮಾಡುಕ್ಕೆ ಕೆಂಪು ಕಲ್ಲುಸಕ್ಕರೆ, ಬಾದಾಮಿ, ಕಲ್ಲಾರು, ಇವನ್ನೆಲ್ಲಾ ತರಿಸಿಟ್ಕೋಬೇಕೇನೋ, ಹಾಗಾಗಿದ್ದರೆ ಇವತ್ತು ನಾಳೀಲಿ ಅಂಗಡಿಯಿಂದ ತರಿಸಬೇಕು ಅಂದುಕೊಂಡಿದ್ದೆ. ಹದಿನಾರನೇ ತಾರೀಖು ಸಂಜೆ ರೈಲಿನಲ್ಲಿ ನಮ್ಮೂರಿಗೆ ಬರ್ತೀನಿ ಅಂತ ಬರೆದಿದ್ದಾರಮ್ಮ" ಎಂದಳು ಲಕ್ಷ್ಮಿ.

"ಹದಿನಾರು; ಈ ತಿಂಗಳ ಹದಿನಾರು! ದೀಪಾವಳಿ ಮುಂದಿನ ತಿಂಗಳಲ್ಲೇ. ಒಂದು ತಿಂಗಳ ಮುಂಚೆನೇ ಬಂದುಬಿಡ್ತಾರೆಯೇನೇ? ಇವರೂ ಊರಿನಲ್ಲಿ ಇಲ್ಲವಲ್ಲೇ? ರೈಲ್ವೆ ಸ್ಟೇಷನ್ನಿಗೆ ಹೋಗಿ ಯಾರು ಕರ್ಕೊಂಡು ಬರ್ತಾರೆಯೇ? ಇನ್ನು ಏಳೇ ದಿವಸ ಇದೆಯಲ್ಲೇ?" ಎಂದು ಅಮ್ಮ ಒದ್ದಾಡುಕ್ಕೆ ಶುರು ಮಾಡಿದಳು.

"ದೀಪಾವಳಿ ಹಬ್ಬಕ್ಕೆ ಅವರಿರೋ ಊರಲ್ಲಿ, ಹದಿನೇಳನೇ ತಾರೀಖಿನಿಂದ ರಜಾ ಕೊಡ್ತಾರಂತಮ್ಮ. ಆದಕ್ಕೇ ಅವರು ಬರ್ತಾ ಇದಾರೆ. ನಮ್ಮೂರಲ್ಲಿ ಯಾವಾಗಮ್ಮಾ ಹಾಗಾದರೆ ದೀಪಾವಳಿ?" ಎಂದು ಲಕ್ಷ್ಮಿ ಮುಗ್ಧೆಯಂತೆ ಕೇಳಿದಳು.

"ಮುಂದಿನ ತಿಂಗಳು ಕಣೆ! ನಮ್ಮೂರಲ್ಲಿ ದೀಪಾವಳಿ. ಅಧಿಕಮಾಸ ಬಂದು ಒಂದು ತಿಂಗಳು ಮುಂದಕ್ಕೆ ಹೋಯಿತಲ್ಲೇ! ಈಗೇನೇ ಮಾಡೋದು, ಅಧಿಕ ಮಾಸದಲ್ಲಿ ಅಳಿಯ ಬಂದರೆ, ಒಂದು ತಿಂಗಳೂ ದೀಪಾವಳಿ ಮಾಡುಕ್ಕಾಗುತ್ತ್ಯೇನೆ? ದಿನ ಬೆಳಗಾದರೆ ಪಟಾಕಿ ಹಾರಿಸ್ಕೊಂಡು, ಸಂಜೆ ಆದರೆ ಮತಾಪು ಹಚ್ಚಿಕೊಂಡು, ರಜಾಕ್ಕೆ ಬಂದ ಅಳಿಯ ಕೂತುಕೋಬಹುದು. ಆದರೆ ಬಡ ಅತ್ತೆ, ಒಬ್ಬಳೇ ಹ್ಯಾಗೇ ನಿಭಾಯಿಸ್ಲಿ, ನೀನೋ ಅವರ ಆರೈಕೇನ ನೋಡಿಕೊಳ್ಳೋದರಲ್ಲೇ ಸುಸ್ತಾಗಿಬಿಡ್ತಿ. ಸುತ್ತುಗೆಲಸಕ್ಕೂ ಸಿಗುಲ್ಲ. ಇವರೂ ಊರಲ್ಲಿಲ್ಲ. ಏನು ಮಾಡಲೇ ಈಗ" ಎಂದು ಹಲುಬಿದಳು, ಅಮ್ಮ.

"ಇದು ಯಾಕಮ್ಮಾ! ಹೀಗೆ ಹೆದರಿಕೋತಿ. ರೈಲ್ವೆ ಸ್ಟೇಷನ್ನಿಗೆ ನಾನು ಹೋಗಿ ಕರಕೊಂಡು ಬರ್ತೀನಿ. ಅವರೂರಿನಲ್ಲಿ ದೀಪಾವಳಿಗೆ ರಜಾ ಕೊಟ್ಟರೆ ನಮ್ಮೂರಿನಲ್ಲಿ ದೀಪಾವಳಿ ಆಗೋತನಕ ರಜಾ ಮುಂದುವರೆಸ್ತಾರೇನಮ್ಮ? ಬರ್ತಾರೆ, ಬಂದು ಒಂದೆರಡು ದಿನ ಇರ್ತಾರೆ. ಅವರು ಬಂದಾಗಲೇ ಹಬ್ಬದ ಅಡಿಗೆ ಮಾಡಿದರೆ ಆಗುಲ್ವೇ? ಹೊರಟುಹೋಗ್ತಾರೆ. ಇದಕ್ಕೆ ಯಾಕೆ ಇಷ್ಟು ತೊಂಚಾವಂಚ?" ಎಂದು ಮಗಳು ಸಮಾಧಾನ ಹೇಳಿದಳು.

ಅಕ್ಟೋಬರ್ ಹದಿನೇಳಕ್ಕೆ ಅಳಿಯಮೈಯ್ಯ ಬಂದಿಳಿದ. ಲಕ್ಷ್ಮೀನೇ ಸ್ಟೇಷನ್ನಿಗೆ ಹೋಗಿ ಕರೆದುಕೊಂಡು ಬಂದಳು. ಅತ್ತೆ ಮನೆಗೆ ಅಳಿಯ ಬಂದ ಅಂತ ಅತ್ತೆಮ್ಮ ಶಾವಿಗೇನ ಒತ್ತಿ ಒತ್ತಿ ಸಿದ್ಧಮಾಡಿಕೊಂಡಿದ್ದಳು. ಪೂಜೆ ಮಂಗಳಾರತಿ, ಆರತಿ ಇತ್ಯಾದಿ ಯಾವುದನ್ನೂ ಮಾಡದೆ ಇದ್ದರೂ. ಎಣ್ಣೆನೀರು, ಶ್ಯಾವಿಗೆ ಪಾಯಸ ಬಾದಾಮಿಹಲ್ವ, ತಂಬುಳಿ, ದ್ರಾಕ್ಷಿಗೊಜ್ಜು, ಇತ್ಯಾದಿಗಳಾವುದೂ ತಪ್ಪಲಿಲ್ಲ.

ನಾಲ್ಕು ದಿನಗಳಾದ ಮೇಲೆ ಅಳಿಯಂದಿರು ಹೇಳಿದರು "ನಾಳೆ ಊರಿಗೆ ಹಿಂತಿರುಗಬೇಕು. ಲಕ್ಷ್ಮೀನೂ ಕರಕೊಂಡು ಹೋಗ್ತೀನಿ. ಮನೆ ಗೊತ್ತುಮಾಡಿದ್ದೇನೆ ಕೆಲಸ ಕಾರ್ಯಕ್ಕೆ ಆಳುಗಳು ವೈನವಾಗಿ ಸಿಕ್ಕಿದ್ದಾರೆ" ಅಂತ.

"ಅಯ್ಯೋ! ಅದು ಹ್ಯಾಗೆ ಸಾಧ್ಯಾಪ್ಪಾ! ಯಜಮಾನ್ರಿನ್ನು ಬಂದಿಲ್ಲ ಅವರು ಬಂದಮೇಲೆ ಪ್ರಯಾಣ ಬೆಳೆಸಿದರೆ ಚೆನ್ನಲ್ಲವೇ? ಎಂದು ಅತ್ತೆಮ್ಮನವರು ರಾಗ ತೆಗೆದರು.

ಆ ಸಂಜೆಯೇ, ದೈವೇಚ್ಛೆ! ಯಜಮಾನರು ಹಿಂತಿರುಗಿದರು. ಮಾವ ಅಳಿಯನ ಕುಶಲ ಸಂಭಾಷಣೆಯೆಲ್ಲಾ ಮುಗಿಯಿತು. ಅಳಿಯನಿಗೆ ಆರು ನೂರು ರೂಪಾಯಿ ಸಂಬಳ ಸಿಕ್ಕಿತು ಅಂದಾಗ ಮಾವಯ್ಯನ ಮುಖ ಅರಳಿತು. ಬಡವನ ಒಬ್ಬಳೇ ಮಗಳು, ಅದ್ಧೂರಿಯಾಗಿ ಇರ್ತಾಳೆ ಅಂದರೆ, ಮಾವನ ಹಿಗ್ಗಿಗೆ ಮಿತಿಯುಂಟೇ? ಹೋಗಿ ಬನ್ನೀಪ್ಪ, ದಿವನಾಗಿ ಬಾಳಿಕೊಳ್ಳೀಪ್ಪ" ಎಂದು ಬಾಯ್ತುಂಬ ಬಡ ಮಾವ ಹರಸಿದ.

ಮಗಳು ಅಳಿಯ ಊರಿಗೆ ಹೋದ ಎಂಟು ಹತ್ತು ದಿನಗಳಲ್ಲಿ ಅಮ್ಮನಿಗೆ ಕಾಗದ ಬಂತು. ನಮ್ಮ ಊರಿಗೆ ಅಳಿಯಂದಿರು ಬಂದಾಗ ದೀಪಾವಳಿ ಹಬ್ಬ ಮಾಡುಕ್ಕಾಗಲಿಲ್ಲ, ಅದಕ್ಕೋಸ್ಕರ ಇವರಂತಾರೆ, ನೀವಿಬ್ಬರೂ ಹಬ್ಬದ ಹೊತ್ತಿಗೆ ನಮ್ಮೂರಿಗೆ ಬನ್ನಿ. ಇಲ್ಲೇ ದೀಪಾವಳಿ ಮಾಡಲಿ ಅಂತ ಖಂಡಿತ ಬರಬೇಕು. ನನ್ನಾಣೆ ಬರಬೇಕು. ಇಲ್ಲಿ ಎಲ್ಲಾ ಅನುಕೂಲವಾಗಿದೆ ಅಂತ ಮಗಳ ಕಾಗದ.

ಅತ್ತೆಮ್ಮ ಮಾವೈಯ್ಯ ಮಾತನಾಡಿಕೊಂಡರು. ಇರೋರು ಇಬ್ಬರು ಮುದುಕರು. ಮನೇಲಿ ಕಡೆಗೆ ಬೆಕ್ಕಿನ ಮರಿಯೂ ಇಲ್ಲ, ಇಲ್ಲಿ ದೀಪಾವಳಿ ಮಾಡೋದು ಏನು ಚೆನ್ನ. ಅಳಿಯನ ಮನೆಗೆ ಹೋಗೋಣ. ಅಲ್ಲಿ ದೀಪಾವಳಿ ಹಬ್ಬಾನ, ನಮ್ಮ ಪಂಚಾಂಗದ ರೀತ್ಯಾ, ನಮ್ಮ ಖರ್ಚಿನಲ್ಲೇ ಮಾಡೋಣ. ಆಮೇಲೆ ಹತ್ತಿರದಲ್ಲೇ ಕಾಶಿಯಾತ್ರೆ, ಬದರಿಪ್ರವಾಸ ಎಲ್ಲಾ ಮುಗಿಸಿಕೊಂಡು ಬರೋಣ ಅಂತ ನಿರ್ಧಾರ ಮಾಡಿದರು.

ಚಂದ್ರಮಾನದ ಲೆಕ್ಕಾಚಾರದಂತೆ, ಡಾರ್ಜಿಲಿಂಗಿನಲ್ಲಿ ಅತ್ತೆಮಾವಂದಿರು ಅಳಿಯ ಮಗಳ ಮನೇಲಿ ಶಾಸ್ತ್ರೋಕ್ತವಾಗಿ ದೀಪಾವಳಿ ಹಬ್ಬ ಮಾಡಿದರು.

ಬಡ ಮುತ್ತೈದೇಗೆ ಇಜ್ಜೋಡಿ ದೀಪಾವಳಿ ಆಯ್ತು, ಈ ರೀತಿ.

ಹಳೆ ಸುದ್ದಿ ಬಿಸಿಯಾದುದು

೧೯೬೦ ರ ಜುಲೈ ೪ನೇ ತಾರೀಖಿನ ಪಂಚ್ ಪತ್ರಿಕೆಯ ಪಾರ್ಲಿಮೆಂಟ್ ಪುಟದಲ್ಲಿ ಪ್ರಕಟಿಸಿದ ಸುದ್ದಿ.

" ಮಿಕ್ಕ ಹೊತ್ತಿನಲ್ಲಿ ಪಾರ್ಲಿಮೆಂಟ್ ಸಭೆಯು ಸೈನ್ಯದ ವಿಷಯಗಳನ್ನು ಪರಿಶೀಲಿಸಿತು ಸಣ್ಣಪುಟ್ಟ ವಿಷಯಗಳಿಂದ ದೊಡ್ಡ ವಿಷಯಗಳ ತನಕ ಎಲ್ಲವನ್ನೂ ಚರ್ಚೆ ಮಾಡಿತು. ಉದಾಹರಣೆಗೆ ರಾತ್ರಿ ಹೊತ್ತಿನಲ್ಲಿ ಸಿಪಾಯಿಗಳು ತಮ್ಮ ಬಿಡಾರಗಳ ಹೊರಗೆ ಓಡಾಡಬಹುದೇ ? ಅಥವಾ ಬೇಡವೇ ? ಎಂಬ ವಿಷಯದಿಂದ; ಹೈಡ್ರೋಜನ್ ಬಾಂಬನ್ನು ಪ್ರಯೋಗಿಸಬೇಕಾದರೆ ಯಾರು ಅಧಿಕಾರ ಹೊಂದಿರ ಬೇಕು ? ಎಂಬ ವಿಷಯದ ತನಕ ಚರ್ಚಿಸಲ್ಪಟ್ಟುವು.

ಬ್ರಿಟಿಷ್ ಸೈನಿಕರು ಮಾನವಂತರು, ಮರ್ಯಾದಸ್ಥರು, ಅವರುಗಳು ಯಾವ ದೇಶದಲ್ಲೇ ಇರಲಿ. ಯಾವ ಬಿಡಾರದಲ್ಲೇ ಇರಲಿ ನೀತಿವಂತರಾಗಿಯೇ ಇರುತ್ತಾರೆ. ಅವರ ಮೇಲೆ ತಮ್ಮ ಬಿಡಾರವನ್ನು ರಾತ್ರಿ ಹೊತ್ತು ಬಿಟ್ಟು ಹೋಗ ಬಾರದು ಎಂಬ ಹೇಯವಾದ ನಿರ್ಬಂಧವನ್ನು ಹಾಕಕೂಡದು ಎಂದು ಹಲವಾರು ಪಾರ್ಲಿಮೆಂಟ್ ಸದಸ್ಯರುಗಳು ವಾದಿಸಿದರು ಆಗ.

ಪಶ್ಚಿಮ ಜರ್ಮನಿಯಲ್ಲಿ ಬ್ರಿಟಿಷ್ ಸೈನಿಕರು ಬಿಡಾರದಿಂದ ಹೊರಗೆ ರಾತ್ರಿ ಹೊತ್ತಿನಲ್ಲಿ ಅಡ್ಡಾಡಿದಾಗ ಅವರುಗಳಿಗಾದ ಅವರುಗಳಿಂದ ಊರಿನವರಿಗೆ ಆದ ಕಷ್ಟನಷ್ಟಗಳನ್ನು ವಿವರಿಸುತ್ತಾ " ಆದುದರಿಂದಲೇ ಮದುವೆಯಾಗದ ಸಿಪಾಯಿಗಳು ರಾತ್ರಿ ಬಿಡಾರದಲ್ಲೇ ಇರಬೇಕು " ಎಂದು ಕಟ್ಟಾಜ್ಞೆ ಮಾಡಿದ್ದೇವೆ. ಈ ಆಜ್ಞೆಯನ್ನು ಸಡಿಲಗೊಳಿಸುವ ಪ್ರಶ್ನೆಯೇ ಏಳುವುದಿಲ್ಲ ಎಂದು ಒಬ್ಬಾತ ಖಂಡಿತ ವಾಣಿಯಲ್ಲಿ ಹೇಳಿದರು.

ಯಾರು ಗೊತ್ತೆ ? ಹಾಗೆ ಹೇಳಿದವರು ? ಶ್ರೀ ಜಾನ್ ಪ್ರೊಫ್ಯೂಮೊ! ಆಗ ಅವರು ಬ್ರಿಟನ್ನಿನ ಸಮರ ಸಚಿವರಾಗಿದ್ದರು. ಅವರಿಗೆ ಕ್ರಿಸ್ಟೀನ್‌ಕೀಲರ್ ಆ ವೇಳೆಗೆ ನಿಜಸ್ಥಿತಿಯನ್ನು ಕಲಿಸಿಕೊಟ್ಟಿರಬೇಕು.

ತ್ರೈಲೋತ್ತ್ರಮಾ

ವಿರಾಟಭವನದಲ್ಲಿ ಅಂದು ನಮ್ಮ ಮಾತು, ಹಾಗೇ ಈ ನಡುವೆ, ಭಾರತೀಯ ಪ್ರೇಕ್ಷಕನಿಗೆ ಮನರಂಜನೆ ಒದಗಿಸುತ್ತಿರುವ, ಭಯಂಕರ ಪತ್ತೇದಾರಿ ಮತ್ತು ಅತಿ ಭಯಂಕರ ವಿಜ್ಞಾನಿಗಳ ಬಗ್ಗೆ ಸಿನಿಮಾ ಚಿತ್ರಗಳ ಕಡೆ ತಿರುಗಿತು. ನಮ್ಮ ಪರಶು ಮೊದಲರಾತ್ರಿಗೆ ಆಗಲೇ "ಕಿಸ್ಮತ್-ಮೇ-ಡಮಾರ್" ಚಿತ್ರ ನೋಡಿ ಬಂದಿದ್ದ.

"ಸತ್ಯವಾಗಿ ಹೇಳೋದಾದ್ರೆ, ಕಿಸ್ಮತ್-ಮೇ-ಡಮಾರ್ ನಲ್ಲಿ ನಡೆದ ಪ್ರಸಂಗವನ್ನು ನಂಬಲಸಾಧ್ಯ!" ಅಂದ.

"ಯಾವ ಪ್ರಸಂಗ?" ಚೌ ಚೌ ತಿನ್ನುತ್ತಾ ಒಬ್ಬರು ಕೇಳಿದರು.

"ಒಬ್ಬ ಮನುಷ್ಯ-ಅಥವಾ ಮಹಿಳೆಯೇ ಆದರೂ-ಏಡಿಯಾಗಲು ಸಾಧ್ಯವೇ?"

"ಛೆ! ಅಸಾಧ್ಯ!" ಅಂದರು ಚೌ ಚೌ.

"ಎಂದಿಗೂ ಇಲ್ಲ! ಅಂದರೆ ಶುದ್ಧ ಅಸಾಧ್ಯ! ಅಸಂಬದ್ಧ!" ಅಂದರು ಮತ್ತೊಬ್ಬರು ಪಕೋಡಾ ಮುರಿಯುತ್ತಾ.

ಖಾರಾ ಬೂಂದಿ, ಓಂಪುಡಿ, ಬಾಳೇಕಾಯಿ ಬಜೆ, ಮದ್ದೂರು ವಡೆ ಮತ್ತು ನಾನು ಎಲ್ಲರೂ ನಮ್ಮ ಅಪನಂಬಿಕೆಗಳನ್ನು ಸೂಚಿಸುವಂತೆ ತಲೆಗಳನ್ನು ಅಲ್ಲಾಡಿಸಿದೆವು.

"ಒಂದು ದೃಷ್ಟಿಯಿಂದ ನೋಡಿದರೆ, ಪ್ರಪಂಚದಲ್ಲಿ ಅಂದರೆ,ಸಧ್ಯದ ಪ್ರಪಂಚದಲ್ಲಿ, ಕೆಲವು ವಿಷಯಗಳಲ್ಲಿ ಯಾವುದು ನಂಬಲಾರ್ಹ, ಯಾವುದು ನಂಬಲಸಾಧ್ಯ ಅಂತ ಹೇಳುವುದು ಕಷ್ಟ!"

ಈಶಾನ್ಯ ದಿಕ್ಕಿನಿಂದ ಕೇಳಿಬಂದ ಈ ಮಾತುಗಳನ್ನು ಒಂದು ಇಡೀ ಖಾರದ ಗೋಡಂಬಿ ಕೈಲಿ ಹಿಡಿದಿದ್ದ ಮಲ್ಹಾರಿ ರಾಯರು ಆಡಿದ್ದರು.

"ಪರುಶು, ಮತ್ತೊಂದು ಖಾರದ ಗೋಡಂಬಿ ತಾ ಖಾರ ರಸವತ್ತಾಗಿದೆ" ಅನ್ನುತ್ತಾ ನಮ್ಮ ಕಡೆ ತಿರುಗಿದರು.

"ಪ್ರಾಯಶಃ ನನ್ನ ಮಾತನ್ನು ಕೇಳಿ ನಿಮಗೆಲ್ಲಾ ಆಶ್ಚರ್ಯವಾಗಿರಬಹುದು. ನನ್ನ ತಮ್ಮ ಚಿದಂಬರನ ವಿಷಯ ಕೇಳದರೆ ನಿಮಗೆ ನನ್ನ ಮಾತಿನ ಅರ್ಥವಾದೀತು."

" ಅಂದರೆ ಆತ ಏಡಿಯಾದರೆ ?" ಪಕೋಡ ಕೇಳಿದರು.

" ಛೆ ! ಇಲ್ಲ ಚಿದಂಬರನ ವಿಚಿತ್ರ ಅನುಭವ ನೀವು ಕೇಳಿದರೆ, ಕಿಸ್ಮತ್-ಮೇ-ಡಮಾರ್‌ನಲ್ಲಿ ಏಡಿಯಾಗಿ ಪರಿವರ್ತಿತನಾಗುವ, ಅಥವಾ ಪರಿವರ್ತಿತಳಾಗುವ .. "

" ಪರಿವರ್ತಿತಳಾಗುವ ಅನ್ನಿ. ಪ್ರೊಫೆಸರ್ ಎಂ. ಭೂತ್, ಚಿತ್ರದ ನಾಯಕನ ಪ್ರೇಯಸಿಯನ್ನು ಏಡಿಯಾಗಿ ಪರಿವರ್ತಿಸಿ ತನ್ನ ಸೀರಿನ ಸೀಸೆಯಲ್ಲಿ ಹಾಕಿಟ್ಟಿರುತ್ತಾನೆ ! " ಅಂದ ಪರಶು

" ಸರಿ—ಪರಿವರ್ತಿತಳಾಗುವ ಪ್ರಸಂಗಕ್ಕಿಂತಲೂ, ಯಾವ ದೃಷ್ಟಿಯಲ್ಲೂ ಕಡಿಮೆ ಇಲ್ಲವೆಂದು ನೀವೇ ಒಪ್ಪುತ್ತೀರಿ "

ನಾವೆಲ್ಲ ಆಶ್ಚರ್ಯದಿಂದ ಒಬ್ಬರ ಮುಖ ಒಬ್ಬರು ನೋಡಿಕೊಂಡೆವು.

" ನನ್ನ ತಮ್ಮ ಚಿದಂಬರನ ಹೆಸರು ನೀವು ಕೇಳಿರಬಹುದು ಚಿದಂಬರದ ಪ್ರಸಿದ್ಧ ಔಷಧ ಮತ್ತು ರಸಾಯನಿಕ ವಸ್ತುಗಳಿಂದ ಚಿದಂಬರ ರಸಭಸ್ಮ , ಚಿದಂಬರ ಮೇನಕಾ ನವನೀತ್, ಚಿದಂಬರ ತಿಲೋತ್ತಮಾ ತ್ರೈಲೋತ್ತಮ, ಚಿದಂಬರಾಂಜನ್ ಚಿದಂಬರ ವಾತ-ಪ್ರೋ ಇನ್ನೂ ಹತ್ತಾರು ಔಷಧೋಪಕರಣಗಳ ಕರ್ತ ! ಅದೇ ಚಿದಂಬರ ನನ್ನ ತಮ್ಮ ನಾನೇ ಚಿದಂಬರನ ಮತ್ತು ವಸಂತಳ ಮದುವೆಯಲ್ಲಿ ಧಾರೆಗೆ ಕುಳಿತುಕೊಳ್ಳದಿದ್ದರೆ, ಅವನು ಮದುವೆಯಾಗಿ ಮಡದಿ ಮಕ್ಕಳೊಂದಿಗೆ ಸುಖವಾಗಿದ್ದಾನೆ ಅಂತ ನಾನೇ ನಂಬುತ್ತಿರಲಿಲ್ಲ.

ನಾವೆಲ್ಲ ಆಶ್ಚರ್ಯದಿಂದ ಪುನಃ ಒಬ್ಬರ ಮುಖ ಒಬ್ಬರು ನೋಡಿಕೊಂಡೆವು.

ನನ್ನ ತಮ್ಮ ಚಿದಂಬರ. (ಮಲ್ಹಾರಿರಾಯರು ಹೇಳಿದರು) ಅದೇ ತಾನೇ ರಸಾಯನ ಶಾಸ್ತ್ರದಲ್ಲಿ ಪ್ರಶಸ್ತಿ ಪಡೆದು ಬಿ.ಎಸ್ಸಿ. ಪಾಸು ಮಾಡಿ, ಮನೆಯಲ್ಲೇ ತನ್ನ ಪ್ರಯೋಗಗಳನ್ನು ಶುರು ಮಾಡಿದ. ತಾನು ಬಿ. ಎಸ್ಸಿ. ಕೊನೆಯ ವರ್ಷದಲ್ಲಿದ್ದಾಗಲೇ ತನ್ನ ಸಹಪಾಠಿ ವಸಂತಳನ್ನು ವರಿಸಿದ್ದ. ವಸಂತಳ ಅಸಾಧಾರಣ ಮೃದುವಾದ, ತುಸಕೆಂಪು, ಎಷ್ಟೋ ಅಷ್ಟು ಮಾತ್ರ ಬಿಳುಪು ವರ್ಣದ ಮುಖವೇ ಚಿದಂಬರನನ್ನು ಆಕರ್ಷಿಸಿದ್ದು ಅಂತ ಹೇಳುತ್ತಾನೆ. ಏಕೆಂದರೆ ಅವನಿಗೆ ನೀಗ್ರೋಗಳು ಎಷ್ಟು ಕುರೂಪಿಗಳೋ, ಅಚ್ಚ ಬಿಳಿಯ ಪಾಶ್ಚಾತ್ಯರೂ, ಅಚ್ಚ ಕೆಂಪಿನ ಸ್ಮಾಚರೂ, ಅಚ್ಚ ಹಳದಿಯ ಚೀನಿಯರೂ ಅಷ್ಟೇ ಕುರೂಪಿಗಳಂತೆ. ಚಿದಂಬರನ ಸಿದ್ಧಾಂತದ ಪ್ರಕಾರ, ಭಾರತೀಯರೇ ದೇವರ ಸ್ವರೂಪಿಗಳು ಅಂತ.

ಒಂದು ದಿನ ಧೈರ್ಯವಾಗಿ ವಸಂತಳಿಗೆ ತನ್ನ ಪ್ರೇಮವನ್ನು ಒಪ್ಪಿಸಿದ.

ನಿಜವಾಗಿ ಚಿದಂಬರರಾವ್. ನನಗೂ ನಿಮ್ಮಮೇಲೆ ಅಸಾಧಾರಣ ಪ್ರೀತಿ ಇದೆ ನೀವು ಅಂದು ರಸಾಯನ ಶಾಸ್ತ್ರದ ಪ್ರಯೋಗ ಶಾಲೆಯಲ್ಲಿ cac$\frac{1}{2}$+4 QN+1+ so3=caQN+2Q+2N+HS+O2+On ಅಂತಸಾಧಿಸಿ, QN ಅಂದರೆ

ಏನೆಂದು ತಿಳಿಸಿದಾಗಲೇ ನನ್ನ ಹೃದಯುವನ್ನು ನಿಮಗಿತ್ತಿದ್ದೆ. ಆದರೆ ನನ್ನ ಸೋದರ ಮಾವ ರಿಟೈರ್ಡ್ ಜಡ್ಜ್ ತ್ರಿಯಂಬಕ ರಾಯರ ಮಗ ಆನಂದ, ಜರ್ಮನಿಯಿಂದ ಬಂದ ತಕ್ಷಣ, ನನ್ನನ್ನು ವಿವಾಹವಾಗಬೇಕೆಂದು ನಿರ್ಧರಿಸಿದ್ದಾರೆ" ಅಂದಳು ವಸಂತ.

ಚಿದಂಬರನಿಗೆ ತನ್ನ ಪ್ರಪಂಚವೇ ಕಳಚಿ ಬಿತ್ತು. ಒಂದೇ ಸಾರಿಗೆ ಸೋದರ ಮಾವಂದಿರು, ಅವರ ಮಕ್ಕಳು ಮತ್ತು ಜರ್ಮನಿಗಳ ಮೇಲೆ ವಿಷಕಾರಿ ಶಪಿಸಿದ.

"ಹಾಗೂ ಚಿದಂಬರರಾವ್ ನೀವು ನನ್ನನ್ನು ಇಷ್ಟು ಮೆಚ್ಚಲಿಕ್ಕೆ ಕಾರಣವಾವಾದರೂ ಏನು? ನನಗಿಂತಲೂ ಸ್ಫುರದ್ರೂಪಿಗಳಿಲ್ಲವೆ?"

"ಇರಬಹುದು ವಸಂತ. ಆದರೆ ನಿನ್ನ ಅಸಾಧಾರಣ ವರ್ಣ, ಬೇರೆ ಯಾರಲ್ಲಿ ಬರಬೇಕು?"

"ಆದರೆ ವರ್ಣ ಶಾಶ್ವತವೆ?"

"ಏಕಲ್ಲ ಪ್ರತಿದಿನ 'ಚಿದಂಬರನ ತಿಲೋತ್ತಮಾ ತೈಲೋತ್ತಮಾ' ಉಪಯೋಗಿಸುವವರಿಗೆ ನೂರು ವರ್ಷ ಕಾಲ ವರ್ಣ ಕ್ಷೀಣತೆಯೇ ಇಲ್ಲ."

"ಚಿದಂಬರನ ತಿಲೋತ್ತಮಾ ತೈಲೋತ್ತಮ! ಯಾವ ಕಂಪನೀದು? ಎಲ್ಲಿ ಸಿಗುತ್ತೆ?"

"ನಾನೇ ಅದರ ನಿರ್ಮಾತ! ಎಲ್ಲಾ ಪ್ರಸಿದ್ಧ ವ್ಯಾಪಾರಿಗಳಲ್ಲೂ ಸಿಗುತ್ತೆ ದೊಡ್ಡ ಬಾಟ್ಲು ಐದು ರೂಪಾಯಿ, ಚಿಕ್ಕ ಬಾಟ್ಲು; ಎರಡೂ ಮುಕ್ಕಾಲು." ಅಂದ ಚಿದಂಬರ.

ಆ ಕ್ಷಣದಲ್ಲಿ ವಸಂತಳ ನೋಟದಲ್ಲಿ ಪ್ರೇಮ, ಆಶ್ಚರ್ಯ ಮತ್ತು ಭರವಸೆ ಎಲ್ಲವೂ ಇದ್ದುವಂತೆ.

ಇದು ನಡೆದ ಒಂದು ವಾರದಮೇಲೆ, ಒಂದು ದಿನ ಚಿದಂಬರನನ್ನು ಕಾಣಲು, ಒಂದು ದೊಡ್ಡ ಬ್ಯೂಕ್‌ಕಾರಿನಲ್ಲಿ, ಒಬ್ಬ ಭಾರಿ ವ್ಯಕ್ತಿ, ಅವನ ಕಾರ್ಖಾನೆಗೇ ಬಂದ

"ಯಾರು .. ನೀ ತಾವು?" ಅಂದ ಚಿದಂಬರ.

"ನನ್ನ ಸೋದರ ಸೊಸೆ ವಸಂತ. ನಾನು ತ್ರಿಯಂಬಕರಾವ್, ವಸಂತಳ ಕಾಗದ ತಂದಿದ್ದೇನೆ." ಅಂದ ಭಾರಿ ಆತ

ಚಿದಂಬರ ಹಿಗ್ಗಿದ. ತನ್ನ ಸೋದರಮಾವನೊಂದಿಗೇ ಕಾಗದ ಕಳುಹಿಸಿರಬೇಕಾದರೆ ತಾನು ಅವರ ಕುಟುಂಬಕ್ಕೆ ಸೇರಿದವನಾಗಿಯೇ ಬಿಟ್ಟವನಂತೆ ಹಿಗ್ಗಿದ ತ್ರಿಯಂಬಕರಾಯರನ್ನು ಆದರದಿಂದ ಸ್ವಾಗತಿಸಿ ಕುರ್ಚಿಯಮೇಲೆ ಕುಳಿತುಕೊಳ್ಳಲು ಆಹ್ವಾನಿಸಿದ. ಆದರೆ ಅವರು ಪುನಃ ಕಾರು ಹತ್ತಿದರು. ಚಿದಂಬರ ವಸಂತಳ ಕಾಗದ ಓದಿದ.

ಶ್ರೀ ಚಿದಂಬರ ರಾಯರಿಗೆ.

ಇನ್ನು ಮುಂದೆ ನನಗೂ ನಿಮಗೂ ಯಾವ ವಿಧವಾದ ವ್ಯವಹಾರವೂ ಬೇಕಾಗಿಲ್ಲ. ನೀವು ನನ್ನನ್ನೂ ಇನ್ನು ಮುಂದೆ ಯಾವ ಸಂದರ್ಭದಲ್ಲಿಯೂ ಭೇಟಿಯಾಗಬಾರದೆಂದೇ ನನ್ನ ಆಶೆ. ವಾಸಂತಿ" ಅಂತ ಬರೆದಿತ್ತು.

ಚಿದಂಬರ ರೊಚ್ಚಿದ್ದ.

" ಸುಳ್ಳು! ಇದು ಅವಳ ಕಾಗದವಲ್ಲ!" ಅಂತ ಕೂಗಿದ.

ಇರಬಹುದು: ಅಕ್ಷರ ಅವಳದ್ದೇ ಆದರೆ ನಿಮ್ಮ ಒತ್ತಾಯದಮೇಲೆ, ನಿಮ್ಮ ಅಮಾನುಷ ಪ್ರೇರಣೆಯ ಮೇಲೆ ಬರೆದಿರಬಾರದೇಕೆ? "

" ನಿನ್ನಂತಹ ಮುಟ್ಠಾಳರೊಂದಿಗೆ ವಾದ ಮಾಡಲು ನನಗೆ ಪುರುಸೊತ್ತಿಲ್ಲ. ಆದರೆ ಪುನಃ ನಿನ್ನ ಪ್ರತಿಷ್ಟೆ ಏನಾದರೂ ನಾನು ಕಂಡರೆ ಹುಷಾರ್ !"

ಅನ್ನುತ್ತಾ ತಮ್ಮ ಕೆಂಪು ಬ್ಯೂಕಿನಲ್ಲಿ ಹೊರಟುಹೋದರು.

ಚಿದಂಬರ ಕೇವಲ ಐವತ್ತು ಸೆಕೆಂಡುಗಳಷ್ಟು ಹೊತ್ತು ಮಾತ್ರ ನಿರಾಶನಾಗಿದ್ದವನು ತಕ್ಷಣ ಚೇತರಿಸಿಕೊಂಡು, ಕಾರ್ಯನಿರತನಾದ. ಅವನು ಅಸಾಧಾರಣ, ಪತ್ತೇದಾರಿ ಕಾದಂಬರೀ ಪ್ರಿಯ ತನಗೆ ಒದಗಿದ್ದ ಸಂದರ್ಭದಲ್ಲಿ, ಪುರುಷೋತ್ತಮ ಮಧುಸೂಧನ, ಷೆರ್ಲಾಕ್ ಹೋಮ್ಸ್, ಚಿಲಂ, ಹೆರ್ಕ್ಯೂಲ್ ಪೀರೊ, ಸಿದ್ದರಾಮಣ್ಣ, ಲಾಲಾಜೀ, ಕಿಕ್ ಬಕೆಟ್ ಮುಂತಾದ ತೀಕ್ಷ್ಣ ಪತ್ತೇದಾರರು ಏನು ಮಾಡುತ್ತಿದ್ದರೆಂದು ಯೋಚಿಸಿದ.

ಕಿಕ್ ಬಕೆಟ್‌ಗೆ ಒಂದು ಸಂದರ್ಭದಲ್ಲಿ ಇದೇ ರೀತಿ ಸಮಸ್ಯೆ ಒದಗಿದಾಗ ಏನು ಮಾಡಿದ್ದ? ಖಳನಾಯಕನ ಗುಹೆ ಹುಡುಕಿದ! ಚಿದಂಬರ-ತ್ರಿಯಂಬಕರಾಯನ ಮನೆ ಪತ್ತೆ ಹಚ್ಚಿದ. ಆಮೇಲೆ ಕಿಕ್‌ಬಕೆಟ್ಟಿನ ಪ್ರತಿಯೊಂದು ತಂತ್ರವನ್ನೂ ಪ್ರಯೋಗಿಸಿದ. ತ್ರಿವಿಕ್ರಮರಾಯನ ಬಳಿ ಕೆಲಸ ಮಾಡುತ್ತಿದ್ದ ಆಳಿನ ಸ್ನೇಹ ಬೆಳೆಸಿದ. ಆಳಿನ ತಾಯಿಗೆ ಬಹಳ ದಿನಗಳಿಂದ ಭಾದೆ ಕೊಡುತ್ತಿದ್ದ ವಾತರೋಗವನ್ನು 'ಚಿದಂಬರ ವಾತಪೋ' ಗುಳಿಗೆಗಳಿಂದ ವಾಸಿ ಮಾಡಿ, ಆಳಿಗೆ ಒಂದು ವಾರ ರಜ ತೆಗೆದುಕೊಳ್ಳಹೇಳಿದ. ತನ್ನ ಕ್ರಾಪಿಗೆ 'ಚಿದಂಬರ ಕೇಶಪಾಶ' ತೈಲ ಹಚ್ಚಿ ಬಟ್ಟತಲೆ ಮಾಡಿಕೊಂಡ. ತನ್ನ ಮೇಲ್ತುಟಿಯಮೇಲೆ 'ಚಿದಂಬರ ಕೇಶಕೋಶ' ತೈಲ ಲೇಪಿಸಿಕೊಂಡು ಎರಡೇ ಘಂಟೆಗಳ ಕಾಲದಲ್ಲಿ ಮೀಸೆ ಬೆಳೆಸಿ, ತ್ರಿಯಂಬಕರಾಯನ ಆಳಿನ ಶಿಫಾರ್ಶಿಯಮೇಲೆ ಆಳಿನ ತಮ್ಮನಾಗಿ, ಒಂದು ವಾರ ಬದಲಿ ಕೆಲಸಕ್ಕೆ ಸೇರಿದ.

ಎರಡು ದಿನ ಕಳೆದರೂ ವಸಂತಳ ಸುಳುವಿಲ್ಲ. ಆದರೆ ಆ ಬಂಗಲೆಯ ಮಹಡಿಯಮೇಲೆ ಒಂದು ಮೂಲೆಯ ಕೋಣೆ ಸದಾ ಮುಚ್ಚಿತ್ತು. ಆದ್ದರಿಂದ, ತನ್ನ ವಸಂತ ಆ ಕೋಣೆಯಲ್ಲಿ ಬಂಧಿತಳಾಗಿರಬಹುದೆಂಬ ಸಂಶಯ, ಚಿದಂಬರನಿಗೆ

ಆಯಿತು. ಮೂರನೆಯ ದಿನ, ಅಡುಗೆಯ ನಾರಾಯಣ ಚೌತಾರ್ ಆ ಮುಚ್ಚಿದ ಕೋಣೆಗೆ ಊಟದ ತಟ್ಟೆಯನ್ನು ಮುಚ್ಚಿಕೊಂಡು ಹೋಗುತ್ತಿದ್ದುದನ್ನು ಅಕಸ್ಮಾತ್ ಚಿದಂಬರ ನೋಡಿದ ತನ್ನ ಸಂಶಯ ನಿರ್ಧಾರವಾಯ್ತು.

ಐದನೆಯ ದಿನ ಚಿದಂಬರನಿಗೆ ಒಂದು ಅಪುರೂಪ ಅವಕಾಶ ಸಿಗ್ತು. ಹಿಂದಿನ ದಿನ ತಾನೇ ತ್ರಿವಿಕ್ರಮರಾಯರಿಗೆ ಬಾಂಬೆಯಿಂದ ಒಂದು ಸ್ನಾನದ ಸಲಕರಣೆ ಬಂದಿತ್ತು ದೊಂಬೆಯಾಕಾರದ ಒಂದು ತೊಟ್ಟಿಯಲ್ಲಿ ಸ್ನಾನ ಮಾಡುವಾತ ಕುಳಿತುಕೊಂಡು, ಕತ್ತಿನವರಿವಿಗೂ ನೀರು ತುಂಬಿ, ಕತ್ತಿನ ಕೆಳಗೆ ಶರೀರವನ್ನೆಲ್ಲಾ ಮುಚ್ಚುವಂತೆ ಮುಚ್ಚಳ ಇರುವ ಒಂದು ವಿಚಿತ್ರ ಸಲಕರಣೆ. ನೀರಿಗೆ ವಿದ್ಯುಚ್ಛಕ್ತಿ ಬಿಟ್ಟು ನೀರನ್ನು ಒಂದೇ ಸಮವಾದ ಉಷ್ಣತೆಯಲ್ಲಿಡಬಹುದಿತ್ತು. ತ್ರಿವಿಕ್ರಮರಾಯರ ಸೊಂಟವಾತಕ್ಕೆ ಅದು ಬಹಳ ಒಳ್ಳೆಯದೆಂದು ಯಾರೋ ಹೇಳಿದ್ದರಂತೆ. ಸುಮಾರು 500 600 ರೂಪಾಯಿ ಖರ್ಚಿನಲ್ಲಿ ಬಾಂಬೆಯಿಂದ ತರಿಸಿದ್ದರು. ಅದು ಬಂದ ಮಾರನೆಯ ದಿನವೇ ತ್ರಿವಿಕ್ರಮರಾಯ ಅದರಲ್ಲಿ ಕುಳಿತು ಬಿಸಿನೀರಿನ ಚಿಕಿತ್ಸೆ ಅನುಭವಿಸಲು ಹವಣಿಸಿಕೊಂಡರು. ಚಿದಂಬರನ ಸಹಾಯದಿಂದ, ತಾವು ಅದರಲ್ಲಿ ಮೊದಲು ಉಗುರು ಬೆಚ್ಚನೆಯ ನೀರು ತುಂಬಿ, ತಾವು ಕುಳಿತು, ತಮ್ಮ ಕತ್ತಿನ ಸುತ್ತ ಮುಚ್ಚಳದಿಂದ ಬಂಧಿಸಿಕೊಂಡರು. ಆಮೇಲೆ ಕರೆಂಟು ಬಿಡಲಾಯ್ತು. ಇನ್ನು ಕಾಲು ಗಂಟೆಯಮೇಲೆ ದೊಂಬೆಯ ಮುಚ್ಚಳ ತೆಗೆಯಬೇಕೆಂದು ತ್ರಿವಿಕ್ರಮರಾಯರು ಚಿದಂಬರನಿಗೆ ಆಜ್ಞೆ ಮಾಡಿದರು.

ಕೇವಲ ಐದೇ ನಿಮಿಷಗಳಾಗಿರಬಹುದು ದೊಂಬೆಯಲ್ಲಿ ನೀರು ಕುದಿಯಲಾರಂಭಿಸಿತು

"ರಾಮಯ್ಯಾ!!!" ಅಂತ ಅರಚಿದರು.

ರಾಮಯ್ಯ ಚಿದಂಬರನ ತಾತ್ಕಾಲಿಕ ಹೆಸರು.

ಚಿದಂಬರ ಬಂದ.

"ಥ! ಮೂರ್ಖ! ಈ ಯಂತ್ರಕ್ಕೆ ಏನು ಮಾಡಿದಿ. ನೀಳು ಕುದಿಯುಕ್ಕೆ ಹತ್ತಿದೆ! ಈಕ್ಷಣ ಮುಚ್ಚಳ ತೆಗಿ!" ಅಂದರು.

ಚಿದಂಬರನಿಗೆ ಸಮಯ ಸಿಕ್ಕಿತು.

"ಬೀಗದ ಕೈ ಕೊಡಿ!" ಅಂದ.

"ಯಾವ ಬೀಗದ ಕೈ—ಮುಟ್ಠಾಳ! ಮುಚ್ಚಳಕ್ಕೆ ಬೀಗವೇ ಇಲ್ಲ. ಕೆಳಗೆ ಇರುವ ಕೊಂಡಿ ತೆಗೆಯೋ—ಹುಚ್ಚ!" ಅಂದರು.

"ಈ ಹಾಳು ಯಂತ್ರದ ಬೀಗದ ಕೈ ಅಲ್ಲ. ನನ್ನ ವಸಂತಳನ್ನು ನೀವು ಬಂಧಿಸಿರುವ ಕೋಣೆಯ ಬೀಗದ ಕೈ! ನಾನು ಯಾರು ನೋಡಿ!"

—ಅನ್ನುತ್ತಾ, ತನ್ನ ಒಳಕಿಶೆಯಿಂದ ಒಂದು ಸೀಶೆ ತೆಗೆದು, ಅದರಲ್ಲಿದ್ದ 'ಕೇಶಪಾಶ'ವನ್ನು ತನ್ನ ಮೇಲ್ತುಟಿಯ ಮೇಲೆ ಹಚ್ಚಿಕೊಂಡ ಮಿಾಶೆ ಮಾಯವಾಯ್ತು. ರಾಮಯ್ಯ, ಚಿದಂಬರನಾದ! ತ್ರಿವಿಕ್ರಮರಾಯರು ಚತುರ್ವಿಕ್ರಮರಾಯರಾದರು! ಅರಚಿದರು!

"ದೂರ್ತ! ಮುಟ್ಠಾಳ!! ನಾನಲ್ಲ ವಸಂತಳನ್ನು ಕೂಡಿಹಾಕಿದ್ದು. ಅವಳೇ ತನ್ನ ಮುಖ ತೋರಿಸಲಾರದೆ, ಕೋಣೆ ಸೇರಿದ್ದಾಳೆ. ಧೈರ್ಯವಿದ್ದರೆ ಹೋಗಿ ನೋಡು. ಮೊದಲು ಈ ಹಾಳು ಉಬ್ಬೆಯಿಂದ ನನ್ನನ್ನು ಬಿಡಿಸು!"

"ಆಗಲಿ, ನಿಮ್ಮ ಮಾತು ನಿಜವೋ ಸುಳ್ಳೊ ಪರೀಕ್ಷಿಸಿ ಆ ಮೇಲೆ ನಿಮ್ಮ ಕಡೆಗೆ ಗಮನ ಕೊಡುತ್ತೇನೆ ಉಬ್ಬೆ ಚೆನ್ನಾಗಿ ಆಗಿವ್ವರೆ ಇಸ್ತ್ರಿ ಮಾಡುತ್ತೇನೆ." ಅನ್ನುತ್ತಾ ಓಡಿದ.

ಮುಚ್ಚಿದ ಕೋಣೆಯ ಬಾಗಿಲು ತಟ್ಟಿದ.

"ಯಾರು?" ವಸಂತಳ ಧ್ವನಿ!

"ನಾನು, ಚಿದಂಬರ."

"ಕಾಗದ ಬರೆದಿದ್ದೆನಲ್ಲಾ—ನಾಚಿಕೆ ಇಲ್ಲದೆ ಇಲ್ಲಿಗೇಕೆ ಬಂದೆ?"

ಚಿದಂಬರ ತನ್ನ ಕಿವಿಗಳನ್ನು ನಂಬಲಿಲ್ಲ. ಮುಟ್ಟಿ ನೋಡಿಕೊಂಡ. ಸರಿಯಾಗಿ ಎರಡು ಕಡೆ ಇದ್ದವು.

"ಏಕೆ ವಸಂತ, ನನ್ನ ಮೇಲಿಷ್ಟು ಬೇಸರ?"

"ಏಕೆ ಅಂತ ಕೇಳುವಷ್ಟು ನಿನಗೆ ಧೈರ್ಯವಿದೆಯೆ?"—ಅನ್ನುತ್ತಾ ವಸಂತ ಕೋಣೆಯ ಬಾಗಿಲು ತೆರೆದಳು.

ಹುಲಿಯನ್ನು ಕಂಡವನಂತೆ ಚಿದಂಬರ ಚೀರಿದ. ವಸಂತಳ ಮುಖದ ವರ್ಣ ಕಾಮನ ಬಿಲ್ಲಿನ ಏಳು ಬಣ್ಣಗಳಿಂದಲೂ ಕೂಡಿತ್ತು.

"ನೋಡಿದೆಯಾ, ನಿನ್ನ ತ್ರೈಲೋತ್ತಮದಿಂದ ಆದ ಫಲ! ನಾಚಿಕೆ ಇಲ್ಲದೆ ಪುನಃ ಇಲ್ಲಿಗೆ ಬಂದೆಯಾ?" ಉದ್ರೇಕದಿಂದ ಅಳುಕ್ಕೆ ಶುರು ಮಾಡಿದಳು ವಸಂತ.

ಚಿದಂಬರ ಅಷ್ಟರಲ್ಲಿ ಚೇತರಿಸಿಕೊಂಡಿದ್ದ. ನಕ್ಕ.

"ಇಷ್ಟೇ ತಾನೇ ವಸಂತ? ಚಿದಂಬರನ "ಮೇನಕಾ ನವನೀತ್" ಎರಡು ಬಾರಿ

ಹಚ್ಚಿಕೋ, ಮೊದಲಿದ್ದ ಹಾಗೇ ಆಗುತ್ತೀ! ಚಿದಂಬರನ 'ಮೇನಕಾ ನವನೀತ್' ದೊಡ್ಡ ಬಾಟ್ಲು 5-50. ಸಣ್ಣದು 3" ಅಂದ.

ಎಂತಹ ಸನ್ನಿವೇಶದಲ್ಲಿಯೂ ತನ್ನ ವ್ಯಾಪಾರ ಮನೋಧರ್ಮವನ್ನು ಮರೆಯುವವನಲ್ಲ ಚಿದಂಬರ.

"ನಿಜವಾಗಿ ಹೌದೇ ಚಿದಂಬರರಾವ್ ?"

"ಸತ್ಯವಾಗಿ! ತ್ರೈಲೋತ್ತಮ ಕೆಲವು ಮೃದುವಾದ ಚರ್ಮಗಳಿಗೆ ಈ ರೀತಿ ಪರಿಣಾಮ ಮಾಡಬಹುದು. ನಿನ್ನದು ವಿಪರೀತ ಮೃದುವಾದ ಚರ್ಮ. 'ಮೇನಕಾ ನವನೀತ್' ಕೇವಲ ಎರಡೇ ಬಾರಿ ಉಪಯೋಗಿಸಿದರೆ ಸಾಕು."

ದೊಡ್ಡ ಬಾಟ್ಲಿ ಐದು ಐವತ್ತು, ಸಣ್ಣಬಾಟ್ಲು ಮೂರು—ಅನ್ನುವುದರಲ್ಲಿದ್ದ. ತಕ್ಷಣ ತಡೆದುಕೊಂಡ.

"ವಸಂತ—ನನ್ನ ನಿನ್ನ ನಡುವೆ ವಿರಸಕ್ಕೆ ಬೇರೇನೂ ಕಾರಣವಿಲ್ಲವಲ್ಲ!"

"ಇದೆ!"

ಈ ಘರ್ಜನೆಯ ಹಿಂದೆಯೇ, ಇಡೀ ದೇಹದಿಂದ ಹೊಗೆಯಾಡುತ್ತ, ಟವಲನ್ನು ಮಾತ್ರ ಸುತ್ತಿಕೊಂಡಿದ್ದ ತ್ರಿವಿಕ್ರಮರಾಯರು, ಕೋಣೆಯೊಳಕ್ಕೆ ನುಗ್ಗಿದರು.

"ಇದೆ! ಬೇಕಾದಷ್ಟಿದೆ. ಈಕ್ಷಣ ನಿನ್ನನ್ನು ಗುಂಡಿಕ್ಕಿ ಹಾರಿಸಿಬಿಡ್ತೇನೆ!" ಅಂತ ಘರ್ಜಿಸಿದರು

ಅವರ ಹಿಂದೆ ಚಾತಾರ್ ನಿಂತಿದ್ದ.

"ಹೇಳು! ಈಕ್ಷಣ ನಿನ್ನನ್ನು ನಿರ್ನಾಮ ಮಾಡ್ತೇನೆ. ನಿನ್ನ ಕರುಳುಗಳನ್ನು ಬಗೆದು ತೆಗೆದು, ನಿನ್ನ ಬಾಯಿಯೊಳಕ್ಕೇ ತುರುಕಿ ಬೀದಿಯಲ್ಲಿ ಬಿಸಾಡುತ್ತೇನೆ! ಕುನ್ನಿ! ಎಷ್ಟೋ ನಿನಗೆ ಧೈರ್ಯ? ಈ ಚೌತಾರ ನನ್ನನ್ನು ಬಿಡಿಸದಿದ್ದರೆ—ನಾನು ಜೀವಸಹಿತ ಬೆಂದುಹೋಗುತ್ತಿದ್ದೆ! ಕುನ್ನಿ!"

ಯಂತ್ರಗಳಿಂದ ಯಜಮಾನರನ್ನು ಬಿಡಿಸುವುದು ಅಡಿಗೆಯವನ ಕೆಲಸವಲ್ಲದಿದ್ದರೂ!" ಅಂದ ಚಾತಾರ

ಚಿದಂಬರ ತನ್ನ ನಾಲಿಗೆ ಸರಿಪಡಿಸಿಕೊಂಡ.

"ತ್ರಿವಿಕ್ರಮರಾಯರೇ ಯಾರ ತಪ್ಪು ಅದು? ನಿಮ್ಮ ವಾತಕ್ಕೆ ಚಿದಂಬರನ 'ವಾತ-ಪೋ' ಅಥವಾ ಅದಕ್ಕಿಂತಲೂ ತೀಕ್ಷ್ಣವಾದ ಚಿದಂಬರನ 'ವಾತ-ಗೋ' ಗುಳಿಗೆಗಳನ್ನು ಸೇವಿಸದೆ, ಈ ಹರಕು ಯಂತ್ರಗಳನ್ನು ನಂಬಿಕೊಂಡರೆ, ಜೀವಸಹಿತ ಬೆಂದುಹೋಗದೆ ಮತ್ತೇನು?" ಅಂದ.

"ಚಿದಂಬರ ವಾತ-ಪೋ! ಏನದು? ಎಲ್ಲಿ ಸಿಗುತ್ತೆ? ನೀನು ಹೇಳೋದು ನಿಜವೇ?"

"ಸತ್ಯ. 'ವಾತ-ಪ್ರೊ' ದೊಡ್ಡ ಬಾಟ್ಲು ನಾಲ್ಕು ಐವತ್ತು. ಸಣ್ಣ ಬಾಟ್ಲು ಎರಡು ಐವತ್ತು. 'ಪಾತ-ಗೋ' ದೊಡ್ಡ ಬಾಟ್ಲು ಏಳು ಎಪ್ಪತ್ತೈದು. ಸಣ್ಣ ಬಾಟ್ಲು ನಾಲ್ಕು. ಎಲ್ಲಾ ಪ್ರಸಿದ್ಧ ಔಷಧ ವ್ಯಾಪಾರಿಗಳಲ್ಲೂ ಸಿಗುತ್ತೆ."

"ಚಿದಂಬರ ರಾವ್, ಹುಡುಗಾಟ ಮಾಡಬೇಡ — ನಿಜ ಹೇಳು — ನನ್ನ ವಾತಕ್ಕೆ ಔಷಧಿ ಇದೆಯೊ?"

"ಸತ್ಯ. ಎರಡು ವರ್ಷಗಳ ಹಿಂದೆ ಚರ್ಚಿಲ್ ಬಿದ್ದು, ತಮ್ಮ ಸೊಂಟ ಮುರಿದುಕೊಂಡಾಗ, ಚಿದಂಬರನ 'ವಾತ-ಪ್ರೋ' ಗುಳಿಗೆಗಳಿಂದಲ್ಲದಿದ್ದರೆ—"

ತ್ರಿವಿಕ್ರಮರಾಯರು ಚಿದಂಬರನನ್ನು ತಬ್ಬಿಕೊಂಡರು.

"ಹಾಗಿದ್ದರೆ ಚಿದಂಬರರಾವ್ ಈ ವಸಂತಳನ್ನು ಕೈ ಹಿಡಿಯಲು ನೀನು ಯೋಗ್ಯ! ನನ್ನದೇನೂ ಅಭ್ಯಂತರವಿಲ್ಲ" ಅಂದರು.

ಕೂಡಲೇ ಚಿದಂಬರ ವಸಂತಳ ಕೈ ಹಿಡಿದ. ತಾನೂ ಅವಳೂ ತ್ರಿವಿಕ್ರಮ ರಾಯರಿಗೆ ನಮಸ್ಕಾರ ಮಾಡಿದರು. ತ್ರಿವಿಕ್ರಮರಾಯ ಅವರಿಬ್ಬರಿಗೂ ಆಶೀರ್ವದಿಸಿದರು.

ಅಡುಗೆ ಚೌತಾರ್ ಮುಂದೆ ಬಂದ.

"ಸ್ವಾಮಿ, ಚಿದಂಬರ ರಾಯರೇ ."

"ಏನಪ್ಪಾ ಚೌತಾರ್ ?"

"ನೋಡಿ, ನನಗೆ ಬಹಳ ದಿನಗಳಿಂದ ಹೊಟ್ಟೆಯಲ್ಲೊಂದು ವಾಯು ಸಿಕ್ಕಿಕೊಂಡು ಬಹಳ ಪೀಡಿಸುತ್ತಿದೆ. ನಿಮ್ಮಲ್ಲಿ ಏನಾದರೂ ಔಷಧಿ ಇದೆಯೇ?"

"ಏಕಿಲ್ಲ? ಚಿದಂಬರನ 'ಗ್ಯಾಸ್-ಪಾಸ್' ಭಸ್ಮವನ್ನು ದಿನದಲ್ಲಿ ಎರಡು ಬಾರಿ ಊಟವಾದ ನಂತರ ಒಂದೊಂದು ಚಂಚ, ಜೇನುತುಪ್ಪದಲ್ಲಿ ಕದರಿ ಸೇವಿಸಿದರೆ, ನಿನ್ನ ವಾಯುವಿನ ಪೀಡೆ ಮಾಯವಾಗುತ್ತೆ."

"ನಿಜವೇ ಮಹಾನುಭಾವಾ?"

"ಸತ್ಯ. 'ಗ್ಯಾಸ್-ಪಾಸ್' ಒಂದೇ ಸೈಜು. ಮೂರು ರೂಪಾಯಿ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಸಿಗುತ್ತೆ" ಅಂದ.

ಚಿದಂಬರ-ವಸಂತಳ ಮದುವೆ ಆಯ್ತು. ಈಗ ಚಿದಂಬರ ತನ್ನ 'ಚಿದಂಬರನ ಸ್ಪೆಷಾಲಿಟೀಸ್' ಮಾರಲು ಮೂರು ಫಾರ್ಗೋ ವ್ಯಾನುಗಳನ್ನಿಟ್ಟಿದ್ದಾನೆ.

ಮಲ್ಹಾರಿರಾಯರು ಕಥೆ ಮುಗಿಸಿ ನಮ್ಮ ಕಡೆ ನೋಡಿದರು. ಎಲ್ಲರೂ ತಲೆ ತೂಗಿದೆವು. ಬೇರೇನೂ ಕಾರ್ಯಕ್ರಮವಿಲ್ಲದ್ದರಿಂದ ಎಲ್ಲರೂ ವಿರಾಟಭವನ ಬಿಟ್ಟೆವು.

—ಕೇಫ

" CONVERSAಷಣೆ "

ಇಂಜಿನಿಯರ್ರಾಣಿ

Urgent ಹೊರಡಿ, ಹೋಗೋಣ್ Walk ಉ
Evening ಆದ್ರೂ ಎಂಥಾದ್ Work ಉ
Work while you must ಅಂದ್ರೆ
Meaning ಗೊತ್ತೆ ನಿಮಗೆ ?

ಇಂಜಿನಿಯರ್

ಅಯ್ಯೊ ! Darling ಯಾಕೀ Quarreling
ನಾಳೆ Morning ಸಚಿವರ ಭೆಟ್ಟಿ
ಮುಗಿದಿಲ್ಲಿನ್ನೂ Drawing; Estimate
Progress ಕಾಣಿಸೆ ಒಲಿಯುವರವರು

ಇಂಜಿನಿಯರ್ರಾಣಿ

ಯಾರಿಗೆ ಬೇಕು ? Drawing, Estimate
ಬೇಗ್ಕೊಡಿ ನನಗೆ ಒಂದ್ ಹಸಿರ್ ನೋಟು
ಸಂಜೆ Shopping ಹೋಗಲೇಬೇಕು
Walking ಎಂದೆ, ನೆಪ ಮಾತ್ರಕ್ಕೆ

ಕದ್ದು ಕೇಳಿಸಿಕೊಂಡವ,
ನಾ. ಪಾ. ಲಚ್ಚಯ್ಯ

ದೇವನಗಿರಿ

ಚಂದ್ರುವಿನ ಅವಿವೇಕ

"ಹುಡುಗರ ಪರೀಕ್ಷೆ ಮುಂದಿನ ತಿಂಗಳು ಮುಗೀತಾಲೆ ಎಲ್ಲರ್ನೂ ಕರಕೊಂಡು ಬರ್ತೀನಪ್ಪ; ನೀನಿಷ್ಟು ಹೊಗಳ್ತೀಯಲ್ಲ. ನಿಮ್ಮ ಹಳ್ಳಿಗೆ ಹೋಗಿ ಗೋಪಾಲ ಕೃಷ್ಣನ ದೇವಸ್ಥಾನ ನೋಡಿಕೊಂಡು ಬರೋಣ—ಚಂದ್ರು ಮುಂದಿಟ್ಟ ಅವಲಕ್ಕಿ ಯನ್ನು ಬಾಯಿಗೆ ಹಾಕಿಕೊಳ್ಳುತ್ತ ಹೇಳಿದೆ.

"ಸರಿ ಸರಿ, ನೀನು ಬರುವ ಹೊತ್ತಿಗೆ ನಾನಿಲ್ಲಿ ಇದ್ರೆ ತಾನೆ?"

"ಯಾಕಪ್ಪ! ವರ್ಗದ ವಿಷಯ ಹೇಳ್ತೀಯೇನು?"

"ಹೌದು."

ನನಗೆ ಆಶ್ಚರ್ಯವಾಯಿತು. ಅವಲಕ್ಕಿ ಇದ್ದ ಕೈ ಅಲ್ಲಿಯೇ ನಿಂತಿತು. ನಮ್ಮ ಚಂದ್ರುಗೆ ವರ್ಗಮಾಡುವ ಎಂಟೆದೆ ಯಾವ ಆಫೀಸರಿಗೆ? ಯಾರೇ ಬರಲಿ, ಸಾಧ್ಯವಾದಮಟ್ಟಿಗೂ ಅವರ ಮರ್ಜಿ ಅನುಸರಿಸಿ, ಇಂದ್ರ, ಚಂದ್ರ, ದೇವೇಂದ್ರ ಅಂದು, ವರ್ಗ ತಪ್ಪಿಸಿಕೊಂಡು, ಅಲ್ಲಿಗೂ ಜಗ್ಗದವನು ಬಂದರೆ, ಯಾರದೇ ಶಿಫಾರಸು ತಂದು, ಹತ್ತು ವರ್ಷದಿಂದ ಒಂದೇ ಕಡೆ ತಳ ಊರಿದ್ದ ಇವನಿಗೆ ವರ್ಗ?

"ಯಾರಪ್ಪ ನಿನ್ನನ್ನು ವರ್ಗಮಾಡುವ ಧೀರ?"

"ನಾನೇ ವರ್ಗ ಕೇಳಬೇಕು ಅಂತ ಇದೀನಪ್ಪ."

ನನ್ನ ಕೈಯ್ಯಲ್ಲಿದ್ದ ಅವಲಕ್ಕಿ ತಟ್ಟೆ ಬಿದ್ದುಹೋಯಿತು. "ಯಾಕಯ್ಯ, ಇದೇನು ದುರ್ಬುದ್ಧಿ ಬಂತು ನಿನಗೆ? ಪ್ರಮೋರ್ಷ ಸಿಕ್ಕರೂ ಈ ಊರು ಬಿಡೋದಿಲ್ಲ ಈ ಪಾಪಿ ಪರದೇಶಿಗಳು ಪ್ರಮೋಷನ್ ಕೊಟ್ಟರೆ ಎಷ್ಟು ದುಡ್ಡು ಕೊಟ್ಟಾರು, ನಮ್ಮ ಆಫೀಸಿಗೆ ಪ್ರತಿನಿತ್ಯ ಬರೋ ಧಣಿಗಳು ಒಂದು ದಿನ ಕೊಟ್ಟಷ್ಟು ಇವರು ಎರಡು ತಿಂಗಳಲ್ಲಿ ಕೊಡಲಾರರು ಅಂತ ಹೇಳ್ತಾ ಇದ್ದೆ? ಏನಾಯಿತು ನಿನಗೆ?"

ಚಂದ್ರು ನಿಟ್ಟುಸಿರು ಬಿಟ್ಟ. "ಅಯ್ಯೋ, ಈಗ ಒಬ್ಬ ಪಾಪಿ ಮ್ಯಾನೇಜರಾಗಿ ಬಂದಿದ್ದಾನಪ್ಪ. ಬಂದ ಮರುದಿನದಿಂದ ನೋಡು ನನ್ನ ಕಂಡರೆ ಖಾರ. ಸುಮ್ಮನೆ ಕೂಗಾಡ್ತಾನೆ. ನನಗೂ ರೋಸಿಹೋಗಿದೆ."

ನಮ್ಮ ಚಂದ್ರುವಿನದು ಜಗಳವಾಡುವ ಸ್ವಭಾವವೇ ಅಲ್ಲ ಅದರಲ್ಲಿಯೂ ಆಫೀಸಿನಲ್ಲಿ ಯಾರನ್ನೂ ಎದಿರು ಹಾಕಿಕೊಂಡವನೇ ಅಲ್ಲ.

" ಯಾಕೋ? ಏನಾದರೂ ಕಾರಣ ಇರಬೇಕಲ್ಲ?"

" ಏನೊಪ್ಪ ನಾನೂ ನನ್ನ ಕೈಯ್ಯಲಾದಷ್ಟು ಪ್ರಯತ್ನ ಪಟ್ಟೆ ಕಾರಣವೇ ತಿಳಿಯೋದಿಲ್ಲ. ಮಾತನಾಡಿಸಿದರೆ ಗುರ್ ಅಂತಾನೆ ಕಾಫಿಗೆ ಕರೆದರೆ, ನಿಮ್ಮ ಕಾಫಿ ತಲೆಮೇಲೆ ಸುರಿದುಕೊಳ್ಳಿ ಅಂತಾನೆ "

"ಯಾರಯ್ಯ ಅವನು? ಯಾವ ಊರಿನ ಸುಕುಮಾರಪ್ಪ?"

" ಶಿವಮೊಗ್ಗದ ಕಡೆಯವನಪ್ಪ, ಕೃಷ್ಣಪ್ಪ ಅಂತ."

" ಎಸ್. ಆರ್. ಕೃಷ್ಣಪ್ಪ ಅಂತಲೇನಯ್ಯ? "

" ಹೌದು ಹೌದು. "

" ನಾನು ಹಾಸನದಲ್ಲಿದ್ದಾಗ ನಮ್ಮ ಮನೆ ಪಕ್ಕದಲ್ಲಿ ಒಬ್ಬ ಎಸ್. ಆರ್. ಕೃಷ್ಣಪ್ಪ ಇದ್ದನಪ್ಪ ನಿಮ್ಮ ಡಿಪಾರ್ಟ್‌ಮೆಂಟಿನವರು ನನಗೆ ಚೆನ್ನಾಗಿ ಗುರ್ತು ಕಚ್ಚೆ ಪಂಚೆ ಉಡುತ್ತಾನೆ. ಎಡ ಹುಬ್ಬಿನಮೇಲೆ ದೊಡ್ಡದೊಂದು ಮಚ್ಚೆ ಇದೆ. "

" ಹುಂ ಹುಂ. ಅವನೇ. "

ಹಾಗಾದರೆ ವಿಚಾರಿಸಲೇನಯ್ಯ? ಅವನ ತಂದೆ ಹೋದಾಗ ನನ್ನಿಂದ ಸ್ವಲ್ಪ ಸಹಾಯವಾಗಿದೆ ಅವನಿಗೆ. ಯಾಕೆ ನಿನ್ನ ಮೇಲೆ ಕೆಂಡ ಕಾರ‍್ತಾನೆ ಅಂತ ವಿಚಾರಿಸುತ್ತೇನೆ. "

" ಅಯ್ಯೋ ಅದೊಂದು ಕರಡಿ ಕಣಯ್ಯ ಅದರ ಸಹವಾಸ ನಿನಗೆ ಯಾಕೆ?"

" ಇಲ್ಲ ಸುಮ್ಮನಿರು ಹೋಗಿ ವಿಚಾರಿಸ್ತೇನೆ, ನಾಳೆ ನಿಮ್ಮ ಆಫೀಸಿಗೇ ಬರ‍್ತೇನೆ."

ಮರುದಿನ ನಾನು ಅವರ ಆಫೀಸಿಗೆ ಹೋದಾಗ ಚಂದ್ರು ಅವನ ಕುರ್ಚಿಯಲ್ಲಿ ರಲಿಲ್ಲ. " ಮ್ಯಾನೇಜರು ಹೇಳಿ ಕಳಿಸಿದಾರೆ " ಎಂದ ಜವಾನ. ಸ್ಕ್ರೀನ್ ಆಚೆ ಯಿಂದ ಮಾತುಗಳು ಕೇಳಿಸುತ್ತಿದ್ದುವು. "ಏನ್ರೀ, ತಲೇಲಿ ಬುದ್ಧಿ ಇದೆಯೇನ್ರಿ ನಿಮಗೆ? ಯಾರ‍್ರೀ ನಿಮಗೆ ಅಕೌಂಟೆಂಟ್ ಅಂತ ಕೆಲಸ ಕೊಟ್ಟವ್ರು?

"ಇಲ್ಲಾ ಸಾರ್...." ಚಂದ್ರು ಏನೋ ಹೇಳಲು ಯತ್ನಿಸಿದ.

"ಇಲ್ಲ ಬೆಲ್ಲ ನನಗೆ ಬೇಕಿಲ್ಲ. ಯಾರಿಗೆ ಲಂಚಕೊಟ್ಟು ಈ ಕೆಲಸ ಹೊಡೆ ದರೋ ನೀವು!"

ಆ ಧ್ವನಿ ಕೇಳಿದ ಮೇಲೆ ಅವನು ನನಗೆ ಗುರುತಿದ್ದ ಕೃಷ್ಣಪ್ಪ ಎನ್ನುವುದರಲ್ಲಿ ಅನುಮಾನವೇ ಉಳಿಯಲಿಲ್ಲ.

ಮುಖ ಒರೆಸಿಕೊಳ್ಳುತ್ತ ಬಂದು ಕುರ್ಚಿಯಲ್ಲಿ ಕುಳಿತ ಚಂದ್ರು. "ಕೇಳಿದೆಯೇನಪ್ಪ ಇವನು ಹೊಡಕೊಳ್ಳೋದು? ಬೆಳಗ್ಗೆಯಿಂದ ಸಂಜೆಯವರೆಗೆ ಇದೇ ಗೋಳು."

"ನಮ್ಮ ಕೃಷ್ಣಪ್ಪನೇ ಕಣಯ್ಯ ಅದು, ಅನುಮಾನವೇ ಇಲ್ಲ. ಆ ಗೊಗ್ಗರ ಧ್ವನಿ ಇನ್ನು ಯಾರಿಗೂ ಭಗವಂತ ಕೃಪೆಮಾಡಿಲ್ಲ. ಆದರೆ ಹಾಸನದಲ್ಲಿ ಒಳ್ಳೇ ಹೆಸರು ತೆಗೆದುಕೊಂಡಿದ್ದನಪ್ಪ. ಆಫೀಸಿನಲ್ಲಿ ಎಲ್ಲರೂ ಹೊಗಳೋರು."

"ಇಲ್ಲೂ ಎಲ್ಲರ ಜೊತೆಗೆ ಚೆನ್ನಾಗಿಯೇ ಇದ್ದಾನಪ್ಪ. ನನ್ನ ಗ್ರಹಚಾರ."

ಕೃಷ್ಣಪ್ಪ ನನ್ನನ್ನು ನೋಡುತ್ತಲೇ ಎದ್ದು ತಬ್ಬಿಕೊಂಡುಬಿಟ್ಟ. 'ಈಗತಾನೆ ಊಟವಾಗಿದೆ' ಎಂದರೂ ಕೇಳದೆ ತಿಂಡಿ ಕಾಫಿ ಎಲ್ಲ ತರಿಸಿಬಿಟ್ಟ. "ನೀವೇನು ಇಲ್ಲಿ ಬಂದಿದ್ದೀರಿ, ಯಾವಾಗ ಬಂದಿರಿ?" ಎಂದೆಲ್ಲ ಪ್ರಶ್ನೆಗಳ ಮಳೆಯನ್ನೇ ಸುರಿಸಿದ.

ನಾನು ಚಂದ್ರುವಿನ ಹೆಸರು ಹೇಳುತ್ತಲೆ ಹರಳೆಣ್ಣೆ ಮುಖವಾಯಿತು ಅವನದು. ಆದರೆ ಏನೂ ಮಾಡಲಾಗಲಿಲ್ಲ. ಇವತ್ತು ರಾತ್ರಿ ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಆಹ್ವಾನಿಸಿದ.

* * * *

ಕೃಷ್ಣಪ್ಪನದು ಸೊಗಸಾದ ಆತಿಥ್ಯ. ರಾತ್ರಿ ಊಟ ಮುಗಿಸಿ ಬೆಳದಿಂಗಳಿನಲ್ಲಿ ಈಸಿಛೇರಿನಲ್ಲಿ ಒರಗಿ ವಿಳೇದೆಲೆ ಮೆಲ್ಲುತ್ತಿರುವಾಗ ಚಂದ್ರುವಿನ ಪ್ರಸ್ತಾಪ ತೆಗೆದೆ. ಕೃಷ್ಣಪ್ಪ ಹುಬ್ಬುಗಂಟು ಹಾಕಿದ.

"ಚಂದ್ರು ತುಂಬ ಯೋಗ್ಯ ಕಷ್ಟಪಟ್ಟು ಕೆಲಸ ಮಾಡ್ತಾನೆ. ನಂಬಿಕೆಗೆ ಅರ್ಹ," ನಾನೆಂದೆ. ಅವನು ಸುಮ್ಮನಿದ್ದ.

"ಚಂದ್ರೂಗೆ ತುಂಬ ತಾಳ್ಮೆ. ಅಂತಹವನು ನಿಮ್ಮ ಅಕೌಂಟೆಂಟ್ ಆಗಿರುವುದು ನಿಮ್ಮ ಪುಣ್ಯ."

ಕೃಷ್ಣಪ್ಪನಿಗೆ ಇನ್ನು ತಡೆಯಲಾಗಲಿಲ್ಲ. "ಇರಬಹುದು ಸಾರ್, ಇರಬಹುದು. ಆ ಮಾತು ಈಗ್ಯಾಕೆ, ಬಿಡಿ" ಎಂದ.

"ಅಲ್ಲಾ ಕೃಷ್ಣಪ್ಪನವರೇ—"

"ಬೇಡಿ ಸಾರ್. ಬೇಡಿ ಆ ಮಾತು ಬಿಟ್ಟು ಏನಾದರೂ ಹೇಳಿ."

"ನನ್ನ ಮಾತು ಸ್ವಲ್ಪ ಕೇಳಿ ಆತನೂ ಹೇಳಿದ ನಿಮ್ಮ ಮನಸ್ಸಿಗೆ ಯಾಕೋ ಅವನ ವಿಷಯದಲ್ಲಿ ಬೇಸರ ಅಂತ."

"ಅವರು ಬಹಳ ಬುದ್ಧಿವಂತರು, ಸ್ವಾಮಿ. ಆ ಸುದ್ದಿ ಈಗ ಯಾಕೆ?"

"ಕೃಷ್ಣಪ್ಪನವರೇ, ನೀವು ನನಗೆ ಸ್ನೇಹಿತರು ಅವರೂ ಸ್ನೇಹಿತರು. ನೀವಿಬ್ಬರೂ ಸ್ನೇಹಿತರಾಗಿದ್ದರೆ ನನಗೂ ಸಂತೋಷ. ಇಬ್ಬರೂ ಸಂಭಾವಿತರು. ಮಧ್ಯೆ ಮನಸ್ಸು ಕಹಿಯಾಗಿದ್ದರೆ ಅದು ಏನೋ ತಪ್ಪು ತಿಳಿವಳಿಕೆಯಿಂದ ಇರಬೇಕು."

"ತಪ್ಪು ತಿಳಿವಳಿಕೆ ಏನು ಬಂತು, ಅವರ ಬುದ್ಧಿವಂತಿಕೆ ಅರ್ಥವಾಯಿತು ಅಷ್ಟೆ."

ಅವನು ಆ ವಿಷಯ ಹೇಳಲೊಲ್ಲ. ನಾನು ಬಿಡಲೊಲ್ಲೆ. ಕೊನೆಗೆ ಅವನೇ ಸೋತ. ಎರಡು ಬಾರಿ ಕೆಮ್ಮಿ ಸಂಕೋಚದಿಂದ ಪ್ರಾರಂಭ ಮಾಡಿದ.

"ನೋಡಿ ಸಾರ್, ಇನ್ನೊಬ್ಬರ ಹತ್ತಿರ ಈ ಸುದ್ದಿ ಎತ್ತುತ್ತಿರಲಿಲ್ಲ. ನಿಮ್ಮ ಹತ್ತಿರವಾಗುವ ಹೊತ್ತಿಗೆ ಹೇಳುತ್ತಿದ್ದೇನೆ. ನಾನೂ ಮಕ್ಕಳೊಂದಿಗ; ದೊಡ್ಡ ಸಂಸಾರ, ತಂಗಿ ಮದುವೆ, ತಮ್ಮನ ಓದು ಎಲ್ಲ ಭಾರ ಹೊತ್ತಿದ್ದೇನೆ. ನಿಮಗೆ ಗೊತ್ತಿಲ್ಲವೆ?"

ಇದು ಯಾವುದಕ್ಕೆ ಪೀಠಿಕೆ ಎಂದು ಗೊತ್ತಾಗಲಿಲ್ಲ. ಸುಮ್ಮನೆ ಕೇಳುತ್ತಿದ್ದ.

"ಈಗಿನ ಕಾಲದಲ್ಲಿ ಒಂದು ಸಂಸಾರದ ನಿರ್ವಹಣೆಯ ಕಷ್ಟ ನಿಮಗೆ ತಿಳಿಯದೆ? ಬೆಲೆಗಳು ತಲೆ ಗಿರ್ರ್ ಎನ್ನುವಂತೆ ಏರ್ತಾ ಇವೆ. ಇದರಲ್ಲಿ ಬಂದ ಸಂಬಳದಲ್ಲಿ ಜೀವನ ಸಾಗಿಸೋದು ಅಂದರೆ...."

ಮಾತು ನಿಲ್ಲಿಸಿ ಕೃಷ್ಣಪ್ಪ ನನ್ನ ಮುಖ ನೋಡಿದ.

"ಅಲ್ಲವೇ ಕೃಷ್ಣಪ್ಪನವರೇ ನಾನೂ ಸಂಸಾರ ಕಟ್ಟಿಕೊಂಡಿಲ್ಲವೆ? ನನಗೆ ಅನುಭವವಿಲ್ಲವೆ?" ಸಹಾನುಭೂತಿಯ ಧ್ವನಿಯಲ್ಲಿ ಹೇಳಿದೆ.

ಮನುಷ್ಯನಿಗೆ ಸಮಾಧಾನವಾಯಿತು. "ಅದೇ ನೋಡಿ, ಎಲ್ಲರಿಗೂ ಅನುಭವವೇ. ನಾನೇನು ಅವರಿವರನ್ನ ಗೋಳಾಡಿಸಿ, ಕಾಡಿ, ಲಂಚ ತೆಗೆದುಕೊಳ್ಳುವ ಮನುಷ್ಯನಲ್ಲ ಸಾರ್. ಪ್ರತಿನಿತ್ಯ ದೇವರ ಪೂಜೆ ಮಾಡುತ್ತೇನೆ, ಏಕಾದಶಿ ಊಟ ಮಾಡುವುದಿಲ್ಲ, ನನಗೆ ಲಂಚ ಬೇಕೆ ಸಾರ್? ಅವರಾಗಿ ಅವರ ಸಂತೋಷಕ್ಕೆ ಏನಾದರೂ ತಂದುಕೊಟ್ಟರೆ—"

"ಸರಿಯೇ, ಪಾಪ ಅವರು ಸಂತೋಷವಾಗಿ ತಂದದ್ದನ್ನ ಬೇಡ ಅಂದರೆ ಅವರಿಗೆ ಮನಸ್ಸು ಚಿಕ್ಕದಾಗುವುದಿಲ್ಲವೆ?"

"ಇಲ್ಲವೆ, ನೀವೇ ಹೇಳಿ. ಇಲ್ಲಿಗೆ ಬಂದ ಮೇಲೆ, ಸಾರ್...."

ಒಂದು ನಿಮಿಷ ಕೃಷ್ಣಪ್ಪ ಸುಮ್ಮನಿದ್ದ.

"ಏನಾಯಿತು, ಕೃಷ್ಣಪ್ಪನವರೆ?"

"ಆಗೋದೇನು ಸರ್? ಮನೆಗೆ ಏಕಾದಶಿ ಬಡಿಯಿತು."

"ಅಯ್ಯೋ ಯಾಕಪ್ಪ?"

"ಎಲ್ಲ ನಿಮ್ಮ ಚಂದ್ರಶೇಖರರಾಯರಿಂದ, ಸಾರ್."

"ಅವನೇನು ಮಾಡಿದ? ಹಾಗೆಲ್ಲ ಇತರರಿಗೆ ಅಡ್ಡಿ ಬರುವ ಪ್ರಾಣಿಯಲ್ಲವೇ?"

"ಬುದ್ಧಿವಂತರು ಸಾರ್, ಅವರು. ಬರುವುದೆಲ್ಲ ಅವರಿಗೇ ಬೇಕು ನಾನು ಇಲ್ಲಿಗೆ ಬಂದ ದಿನ, ನಮ್ಮ ಹಳೆಯ ಸಾಹೇಬರೂ ಛಾರ್ಜ್ ಕೊಡುವುದರಲ್ಲಿದ್ದರು. ಅವರಿಗೆ ಒಂದು ಪಾರ್ಟಿ. ಊರಿನ ಮುಖ್ಯ ಕಂಟ್ರಾಕ್ಟರುಗಳೆಲ್ಲ ಬಂದಿದ್ದರು, ಸಾರ್. ನಿಮ್ಮ ಚಂದ್ರಶೇಖರರಾಯರು...."

ಚಂದ್ರುವಿನ ಪಾಪಕಾರ್ಯದ ನೆನವಿನಿಂದಲೇ ಆತನ ಧ್ವನಿ ಗಡುಸಾಗಿತ್ತು.

"ಒಂದು ಭಾಷಣ ಬಿಗಿದರು ಸಾರ್. ದೊಡ್ಡ ಭಾಷಣಕಾರರಲ್ಲವೆ, ಅವರು? ಹೋಗಲಿ, ಮಾತನಾಡಲಿ. ನನ್ನ ಸುದ್ದಿ ಯಾಕೆ ಸಾರ್, ಇವರಿಗೆ?"

ಈ ಮನುಷ್ಯ ಬಂದ ದಿನವೇ ಏನು ಮಾಡಿರಬಹುದು ಚಂದ್ರು ಅಂತಹ ಮಹಾಪರಾಧ?

"ಎಲ್ಲರೆದುರಿಗೆ, ಇವತ್ತೀ ನಮ್ಮ ಆಫೀಸಿಗೆ ಹೊಸ ಮ್ಯಾನೇಜರ್ ಬಂದಿದ್ದಾರೆ. ಅವರು ತುಂಬ ನಿಸ್ಪೃಹರು, ಪ್ರಾಮಾಣಿಕರು, ಸತ್ಯವಂತರು ಅಂತ ಅದೇ ಮಾತನ್ನ ಐದು ನಿಮಿಷ ತಿರುಗಿಸಿ ತಿರುಗಿಸಿ ವರ್ಣಿಸಿದ್ದೂ ವರ್ಣಿಸಿದ್ದೆ."

ನನಗೆ ಚಂದ್ರುವಿನ ಅಪರಾಧ ಅರ್ಥವಾಗಲಿಲ್ಲ, ಕೃಷ್ಣಪ್ಪನ ಧ್ವನಿಯಲ್ಲಡಗಿದ್ದ ಕ್ರೋಧ ಮಾತ್ರ ಅರ್ಥವಾಯಿತು.

"ಕ್ಷಮಿಸಿ, ಕೃಷ್ಣಪ್ಪನವರೇ. ಚಂದ್ರು ಏನು ತಪ್ಪು ಮಾಡಿದ ಅಂತ ಗೊತ್ತಾಗಲಿಲ್ಲ. ಗೊತ್ತಾದರೆ ಅವನಿಗೆ ತಿದ್ದಿಕೊ ಅಂತ ಹೇಳ್ತೀನೆ."

"ನಿಮ್ಮಂತಹ ಸರಳ ಮನಸ್ಸಿನವರಿಗೆ ಅದು ಅರ್ಥವಾಗೋದಿಲ್ಲ ಸ್ವಾಮಿ. ಅದು ಅಸಾಧ್ಯ ಬುದ್ಧಿವಂತಿಕೆ."

"ಹೇಗೇ ಅಂತೀರಿ?"

"ನೋಡಿ ಸಾರ್, ಅದು ಕಂಟ್ರಾಕ್ಟರುಗಳಿಗೆ ಪರೋಕ್ಷವಾಗಿ ಎಚ್ಚರಿಕೆ. 'ಕೃಷ್ಣಪ್ಪನ ಹತ್ತಿರ ಯಾರಾದರೂ ಹೋದೀರಿ, ಅವರು ಸರ್ಕಾರಕ್ಕೆ ತಿಳಿಸಿ ಲಂಚ ನಿರೋಧ ಇಲಾಖೆಗೆ ತಿಳಿಸಿ, ನಿಮ್ಮನ್ನ ಸುಟ್ಟುಬಿಡ್ತಾರೆ. ಹುಷಾರ್! ಎಲ್ಲ ನನ್ನ ಹತ್ತಿರ ಬನ್ನಿ' ಅಂತ ಎಚ್ಚರಿಕೆ ಸಾರ್!"

"ಹೌದೇ!!"

"ಅವತ್ತಿನಿಂದ ಒಬ್ಬ ಕಂಟ್ರಾಕ್ಟರ್ ನೆರಳೂ ಈ ಹೊಸ್ತಿಲ ಮೇಲೆ ಬಿದ್ದಿರಬೇಕಲ್ಲ, ಸಾರ್! ಯಾವಾಗ ನೋಡಿ, ನಿಮ್ಮ ಸ್ನೇಹಿತರ ಮನೆ ಮುಂದೆ ಎರಡು ಜೀಪು, ಆರು ಸೈಕಲ್ಲು, ಹತ್ತು ಜೊತೆ ಚಪ್ಪಲಿ. ಇಲ್ಲಿ ಒಂದು ನರಪಿಳ್ಳೆ! ಉಹುಂ."

ಕೋಪಕ್ಕೆ ಕೃಷ್ಣಪ್ಪನ ಧ್ವನಿ ನಡುಗುತ್ತಿತ್ತು.

ಹೇಗೋ ಸಮಾಧಾನಮಾಡಿ ಬಂದೆ.

* * * *

ಹಿಂದಕ್ಕೆ ಬಂದವನೇ ಚಂದ್ರುವಿಗೆ, "ಅಯ್ಯೋ ಪಾಪಿ, ಇಂತಹ ಕೆಲಸದಲ್ಲಿರುವವನನ್ನ ಸಾರ್ವಜನಿಕವಾಗಿ ಪ್ರಾಮಾಣಿಕ, ನಿಸ್ಪೃಹ ಅಂತ ಯಾಕೋ ಹೊಗಳೋದಕ್ಕೆ ಹೋದೆ?" ಅಂತ ಕೇಳಿ, ಎಲ್ಲವನ್ನೂ ವಿವರಿಸಿದೆ. ಕೇಳಿ, ಚಂದ್ರು ನಿಟ್ಟುಸಿರುಬಿಟ್ಟ.

* * * *

ಈ ಸಲ ನಾನು ಸಂಸಾರ ಸಮೇತ ಹೋದಾಗ ಬಸ್ ಸ್ಟ್ಯಾಂಡಿಗೆ ಚಂದ್ರು ಕೃಷ್ಣಪ್ಪ ಇಬ್ಬರೂ ಬಂದಿದ್ದರು. ಇಬ್ಬರ ಮನೆಯಲ್ಲಿಯೂ ನಮಗೆ ಔತನ. ಇಬ್ಬರೂ ಒಬ್ಬರಿನ್ನೊಬ್ಬರ ಮನೆಗೆ ಊಟಕ್ಕೆ ಬಂದಿದ್ದರು.

"ಏನು ಮಾಡಿದೆಯೋ ಮಂತ್ರ?" ಚಂದ್ರೂನ ಕೇಳಿದೆ.

"ಸ್ವಾತಂತ್ರ್ಯೋತ್ಸವದ ನಿಮಿತ್ತ ಒಂದು 'ಟೀ' ಅಂತ ಆಫೀಸಿನಲ್ಲಿ ಏರ್ಪಡಿಸಿದೆನಪ್ಪ. ಖರ್ಚಿಲ್ಲ ನನ್ನದೆ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನೆಲ್ಲ ಕರೆದಿದ್ದೆ, ನಾನೇ ಭಾಷಣ ಮಾಡಿದೆ, 'ನಮ್ಮ ಮ್ಯಾನೇಜರು ತುಂಬ ಒಳ್ಳೆಯವರು, ಆಫೀಸಿನಲ್ಲಿ ಮಾತ್ರವಲ್ಲ, ಮನೆಗೆ ಹೋಗಿ ಹೇಳಿದರೂ ಕಷ್ಟ ಸುಖ ಕೇಳಿ ತಮ್ಮ ಕೈಯಲ್ಲಾದ ಸಹಾಯ ಮಾಡ್ತಾರೆ ಯಾರ ಮನಸ್ಸನ್ನೂ ನೋಯಿಸುವುದಿಲ್ಲ' ಅಂತ ಹೇಳಿದೆ ಈಗ ಅವರೂ ಸುಪ್ರಸನ್ನರಾಗಿದ್ದಾರೆ."

"ಹೋಗಲಿ ಬಿಡು. ಸ್ನೇಹವಾಗಿದ್ದೀರಲ್ಲ. ಈಗ ಅವನ ಮನೆಯ ಮುಂದೂ ಜೀಪು, ಸೈಕಲ್ಲು, ಚಪ್ಪಲಿಗಳು ನಿಂತಿರುತ್ತವೆ ತಾನೆ?" ಎಂದೆ ನಾನು.

"ನಿನ್ನಿಂದ ಉಪಕಾರವಾಯಿತಪ್ಪ. ನಡಿ, ಅವರ ಮನೆಗೆ ಹೋಗಿ, ರಾತ್ರಿ ಊಟಕ್ಕೆ ಅವರನ್ನೂ ಕರೆದುಬಿಡೋಣ" ಎನ್ನುತ್ತ ಎದ್ದ ಚಂದ್ರು.

—ಎಲ್. ಎಸ್. ಶೇಷಗಿರಿರಾವ್

ಆ ಮಗು—ಹೆಣ್ಣು

ರಾಜೀವಪುರದ ಮಹಾರಾಜರ ಮೊದಲ ಮಗು ತುಂಬಾ ಅಳುತ್ತಿತ್ತು. ಹದಿನೆಂಟು ತಿಂಗಳು ವಯಸ್ಸಾಗಿದ್ದಾಗಲೇ ಅರಮನೆಯ ಛಾವಣಿ ಕೆಳಗೆ ಬೀಳೋಹಾಗೆ ಅಳುತ್ತೆ ಮಗು, ಎಂದು ಯಾರಾದರೂ ಹೇಳಿದ್ದರೆ ನಂಬುವುದಕ್ಕೇ ಆಗುತ್ತಿರಲಿಲ್ಲ. ಅಂಥಾ ನಗಾರಿ ಗಂಟಲು ಮಹಾರಾಣಿಯವರು, ಮಹಾರಾಜರು, ಇತರ ರಾಣಿಯರು, ಚಿಲ್ಲರೆ ರಾಣಿಯರು ಎಲ್ಲರೂ ಸಮಾಧಾನ ಮಾಡುಕ್ಕೆ ತೋಚಿದ್ದೆಲ್ಲವನ್ನೂ ಮಾಡಿದರು. ಆದರೂ ರಚ್ಚೆ ನಿಲ್ಲಲೇ ಇಲ್ಲ.

"ಆರ್ಯಪುತ್ರ! ಅರಮನೆಯ ಆಯುರ್ವೇದದ ಪಂಡಿತರಿಗೆ ಹೇಳಿಕಳಿಸೋಣ. ಮಗುವಿಗೆ ಏನೋ ಬೇನೆ ಬಿದ್ದಿರಬೇಕು. ಮನೆ ಮದ್ದಿಗೆ ಬಗ್ಗುವಹಾಗೆ ಕಾಣಿಸುಲ್ಲ. ಶನಿವಾರವಾದರೂ ಪಂಡಿತರಿಗೆ ಹೇಳಿಕಳಿಸಲೇಬೇಕು" ಎಂದಳು ಮಹಾರಾಣಿ.

"ಆಗಬಹುದು ಆರ್ಯಪುತ್ರಿ! ಹಾಗೆ ಮಾಡದೆ ಇದ್ದರೆ, ರಾಜಮಗು ಬಡಕೊಳ್ತಲೇ ಇದ್ದರೆ, ನಿದ್ರೆ ಬರುವ ಸಂಭವವೇ ಇಲ್ಲ" ಎಂದು ಒಪ್ಪಿದರು ಮಹಾರಾಜರು.

ಆಸ್ಥಾನ ಪಂಡಿತರು ಬಂದರು. ನಾಡಿ ಹಿಡಿದು ನೋಡಿದರು ಕವಡೆ ಹಾಕಿ ನೋಡಿದರು ಮನೆಗೆ ಹೋಗಿ ಮದ್ದು ಕಳಿಸ್ತೀನಿ ಅದನ್ನು ಕೊಡಿ, ಸುಖವಾಗಿ ನಿದ್ದೆ ಹೋಗುತ್ತೆ ಎಂದರು. ಊಳಿಗದವನನ್ನು ಹಿಂದೆ ಹಾಕಿಕೊಂಡು ಹೋದರು.

ಊಳಿಗದವನು ಮದ್ದನ್ನು ತಂದ. ಬೆಳ್ಳಿ ಸಂಪುಟದಲ್ಲಿ ಕಳಿಸಿದ ಗಜ್ಜುಗದಷ್ಟು ಲೇಹ. ಮಹಾರಾಣಿಯವರೇ ಮಗುವಿಗೆ ಲೇಹವನ್ನು ತಿನ್ನಿಸಲು ಪ್ರಯತ್ನಿಸಿದರು.

"ನಿನಗೊಂದು ಆನೆ ಪಟಾಕಿ ತಂದುಕೊಡ್ತೀನಿ, ಇದನ್ನು ತಿನ್ನು ಮರಿ"

"ನಿನಗೆ ಗುಳಪಾವಟೆ ಮಾಡ್ಸಿ ಕೊಡ್ತೀನಿ, ತಿನ್ನು ಚಿನ್ನ"

"ನಿನಗೊಂದು ಮುತ್ತಿನ ಸರ ಹಾಕ್ತೀನಿ, ತಿಂದುಬಿಡು ಮಗು"

ರಾಜಮಗು ಬಾಯಿಬಿಡದೆ ಹಲ್ಲು ಗದುಗು ಹಾಕಿಕೊಂಡೇ ಅಳುವನ್ನು ಮುಂದುವರೆಸಿತು. ಇತರ ರಾಣಿಯರು ಪ್ರಯತ್ನಮಾಡಿದರು. ಪ್ರಯೋಜನವಾಗಲಿಲ್ಲ. ಕಡೆಗೆ ಚಿಲ್ಲರೆ ರಾಣಿಯೊಬ್ಬಳು ನಾನು ತಿನ್ನಿಸ್ತೀನಿ ಎಂದು ಹೇಳುತ್ತಾ, ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು ಬೆಳ್ಳಿ ಸಂಪುಟವನ್ನು ಬಲಗೈಲಿ ಹಿಡಿದುಕೊಂಡಳು ಮಗು ಒಮ್ಮೆ ಕೈ ಬಾರಿಸಿತು. ಸಂಪುಟ ದೂರಕ್ಕೆ ಹೋಗಿ ಬಿತ್ತು. ಲೇಹ ನೆಲದ ಮೇಲೆ ಬಿತ್ತು.

ಅಯ್ಯೋ! ಅಂದರು ಎಲ್ಲರೂ. ಆ ಹೊತ್ತಿಗೆ ನೆಲದ ಮೇಲೆ ಬಿದ್ದಿದ್ದ ಲೇಹವನ್ನು ಮಗು ತೆಗೆದುಕೊಂಡು ಮುಕ್ಕಿಬಿಡ್ತು.

ಆ ಮಗು–ಹೆಣ್ಣು: ಮುಂದಿನ ಕ್ಷಣ ಏನುಮಾಡುತ್ತೋ ಯಾರು ಬಲ್ಲರು!

—ಬಚ್ಚ.

ಗಾಂಪರ ಸರ್ಕಾರ

ಮೂರು ರಾತ್ರಿ ಸರ್ತಿ ಮೇಲೆ ಸರ್ತಿಯಾಗಿ ತೂಕಡಿಸುತ್ತಲೇ ದೊಣ್ಣೆ ಹಿಡಿದು ಮಠದ ಇಡೀ ಶಿಷ್ಯವೃಂದವೇ ಕಾದಿತ್ತು. ಆದರೂ ಆ ಸುಂಡಿಲಿ ಸಿಕ್ಕಲಿಲ್ಲ. ಗಾಂಪರೊಡೆಯರ ಕಾಷಾಯ ವಸ್ತ್ರ, ಕಪಿನಿ, ಕೌಪೀನಗಳನ್ನು ತುಂಡರಿಸಿ ಹಾಕುತ್ತಿತ್ತು ಒಂದು ಮೂಷಕ. ಪಾಷಾಣಕ್ಕೆ ಸಾಯಲಿಲ್ಲ, ಬೋನಿಕ್ಕಿದ್ದರೆ ಒಂದಿಲಿ ಬಾಗಿಲಲ್ಲಿ ನಿಂತು ಬಾಗಿಲು ಮೇಲೆತ್ತಿ ಹಿಡಿದಿತ್ತು. ಕಿಲಾಡಿ ಪುಟ್ಟ ಇಲಿ ಒಳಕ್ಕೆ ಹೋಗಿ ಪಕೋಡ ಕದ್ದು ತಂದು ಎರಡು ಇಲಿಗಳೂ ಫಳಾರಮಾಡಿದ ಸೊಗಸನ್ನು ಆ ರಾತ್ರಿ ಕಾವಲಿದ್ದ ಮಡ್ಡಿ ಸ್ವಯಂ ನೋಡಿ ನಿಬ್ಬೆರಗಾಗಿದ್ದ. ಈ ಇಲಿಗಳಿಗಿರುವ ಬುದ್ಧಿಯಲ್ಲಿ ಅರ್ಧ ಇದ್ದಿದ್ದರೆ ಅದು ಗಾಂಪ ಮಠವೇ ಆಗುತ್ತಿರಲಿಲ್ಲ.

“ಆ ಸುಂಡಿಲಿಗೆ ಮಟ್ಟಹಾಕಲು ಒಂದು ಬೆಕ್ಕು ಸಾಕಬೇಕು ಗುರುವೇ.... ಆ ಬೆಕ್ಕು ಬಂದ ಮೇಲೇ ನಿಮ್ಮ ಕಪಿನಿಗೆ ಮುಕ್ತಿ” ಅಂದಿದ್ದ ಮರುಳ.

—ತಾಯಮ್ಮ ಎಂಬ ಭಕ್ತೆ ಎರಡು ಆಲ್ಸೇಷಿಯನ್ ಬೆಕ್ಕು ದಾನ ಮಾಡಿದ್ದಳು. ಪಾಪ ಅವಕ್ಕೆ ಹಾಲು ಬೇಡವೆ? ಹಾಲು ಕುಡಿದು ಕಸರತ್ತು ಮಾಡಿದ ಮೇಲೆ ತಾನೆ ಆ ಬೆಕ್ಕಿಗೆ ಇಲಿ ಹಿಡಿಯುವ ಶಕ್ತಿ ಬರಬೇಕು, ಉಪವಾಸ ಕೆಲಸ ಮಾಡಲಿಕ್ಕಾಗುತ್ತದೆಯೇ? ಸಂಬಳ ತೆಕ್ಕೊಂಡೇ ಕೆಲಸಮಾಡಲಿಕ್ಕೆ ಲಂಚ ಕೇಳುವ ಕಾಲದಲ್ಲಿ ಹೊಟ್ಟೆಗಿಲ್ಲದೆ ಕೆಲಸ ಮಾಡೆಂದರೆ ಧರ್ಮವೆ? ಧರ್ಮಾಧರ್ಮಗಳ ಪೂರ್ಣ ಅರಿವಿದ್ದ ಗಾಂಪರೊಡೆಯರು, ಈ ಗಡವ ಬಾವುಗಗಳಿಗೆ ಹಾಲಿಗೆಂದೇ ಒಂದು ಹಸು ತರಿಸಿದ್ದರು. ಎಮ್ಮೆಯ ಹಾಲು ಮಂದ, ಬೆಕ್ಕುಗಳು ಚುರುಕಾಗಿ ಕೆಲಸಮಾಡಲು ಹಸುವಿನ ಹಾಲೇ ಉತ್ತಮವೆಂದು ಅಪ್ಪಟ ಕರೀ ಹಸುವನ್ನು ಹಾಲಪ್ಪನವರು ದಾನಮಾಡಿದ್ದರು.

ಹಾಲಪ್ಪನವರ ಹತ್ತಿರ ಎರಡು ಹಸು ಇತ್ತು. ಒಂದನ್ನು ಮಠಕ್ಕೆ ಕೇವಲ ದಾನವೆಂದೇ ಭಾವಿಸುವಂತೆ ಅರ್ಜೆಂಟಿಗೆ ಅವರ ಸಾಲವಾಗಿದ್ದ ಇನ್ನೂರೈವತ್ತಕ್ಕೆ ಮಠಕ್ಕೆ ಮಾರಿದ್ದರು. ಸೊಗಸಾದ ಹಸು. ಅದರ ಕಾಲು ಕಟ್ಟಿಕೊಂಡು ಮುಂದೆ ಬೂಸಾ-ಹುರುಳಿ-ಹಿಂಡಿ ಬಕೆಟ್ಟು ತುಂಬಾ ಹಿಡಿದು, ತಾಜಾ ಮಾಡಿದರೆ ಅರ್ಧ ಗಂಟೆ ಮೇಲೆ ಅರಪಾವು ಹಿಂಡುತ್ತಿತ್ತು, ಪುಣ್ಯಕೋಟಿ.

"ಗುರುಗಳೇ ಈ ಹಸು ಕಾಲು ಕಟ್ಟಲಾರೆ....ಬೇರೇ ಆಳೇಬೇಕು ಅದರ ಮರ್ಜಿ ಹಿಡಿಯಲಿಕ್ಕೆ"—ಎಂದು ದನಕಾಯಲೇ ಇವನು ಹುಟ್ಟಿದ್ದು ಎಂದು ಹೆಸರು ಪಡೆದ ಮಡ್ಡಿ ಹೇಳಿದ

"ಏಯ್ ದನಾ ಕಾಯೋನೇ....ಯಾರ್ನರ ನೋಡೊ ಮತ್ತೆ ಪುಣ್ಯಕೋಟೀನ್ನ ನೋಡ್ಕಳ್ಳಕ್ಕೆ"—ಎಂದಿದ್ದರು ಗುರುಗಳು.

"ಗುರುಗಳೇ....ನನ್ನ ಜೊತೇಗೇ ಹಿಂದೆ ದನಾ ಕಾಯಾಕೆ ಬರ್ತಿದ್ದ ನಾರಪ್ಪನ್ನ ಕರ್ಕಂಡು ಬರ್ಲೆ ?"

"ಕಣೆ ಕೇಳು ಶುದ್ಧ ಮಡ್ಡಿಂದ್ರೆ ಮಡ್ಡೀನೆ ಕಣೋ ಮಡ್ಡಿ ನೀನು.... ಕರ್ಕಂಬಾ...."

ಹಾಗೆಂದಾಗಲೇ ಮಡ್ಡಿಯ ಕ್ಲಾಸ್‌ಮೇಟ್ ನಾರಪ್ಪನನ್ನು ಗಾಂಪ ಮಠದ ಮಾರ್ಜಾಲ ಪೋಷಕನಾಗಿ ಹಾಲು ಸರಬರಾಜಿಗೆ ನೇಮಿಸಿದ್ದರು. ಗುರುಗಳಿಗೆ ಹೆಂಡಿರಿಲ್ಲವೆಂದರೆ ನಾರಪ್ಪನಿಗೆ ಬೇಡವೆ? ಕೆಲಸಕ್ಕೆ ಸೇರುವ ಮುಂಚೆ ಉಚಿತ ವಸತಿ ಸೌಕರ್ಯ ಕೊಟ್ಟರೇನೇ ಪುಣ್ಯಕೋಟಿಯ ಕೊಟ್ಟಿಗೆಗೆ ಕಾಲಿಕ್ಕುವುದೆಂದು ಷರತ್ತು ಹಾಕಿದ್ದ.

ಪುಣ್ಯಕೋಟಿಯ ಕೊಟ್ಟಿಗೆಯ ಪಕ್ಕದಲ್ಲೇ ಅವನಿಗೂ ಕ್ವಾರ್ಟರ್ಸ್ ಪುಕ್ಕಟೆ ಕಟ್ಟಿದ್ದಾಯಿತು. ನಾರಪ್ಪನಿಗೆ ಹೆಂಡತಿ ಒಬ್ಬಾಕೆಯೇ ಆದರೂ, ಮಕ್ಕಳು ಎಂಟು ಮಂದಿ ಇದ್ದರು. ಆ ಬಾಲಕರು ಬೀದಿಯಲ್ಲಿ ಆಡಿದರೆ ಲಾರಿಗಳು ಕೊಲ್ಲುವುವೆಂದು ಅವುಗಳ ತಾಯಿ ಮಾರಕ್ಕ ಮಠದ ಆವರಣದಲ್ಲೇ ಆಡುವ ಆಜ್ಞೆ ಮಾಡಿದ್ದಳು.

ಗುರುಗಳ ಕಪಿನಿಯನ್ನು ಈ ಬಾಲಕರುಗಳು ಗಾಳಿಪಟದ ಬಾಲಂಗೋಚಿಗೆ ಬಗಿದಿದ್ದು ಒಂದು ಪ್ರಕರಣ ಬಿಟ್ಟರೆ ಬೇರೆ ಯಾವ ತೊಂದರೆಯನ್ನೂ ಕೊಟ್ಟಿರಲಿಲ್ಲ.

ಹೀಗೆ ಗಾಂಪರೊಡೆಯರ ಮಠದ ಸಂಸಾರ ಕೇವಲ ಸುಂಡಿಲಿಯ ದೆಸೆಯಿಂದ ಬೆಳೆದು ಬಂದು ಮಠದ ಆಡಳಿತದ ಜವಾಬ್ದಾರಿಯನ್ನು ಹೆಚ್ಚಿಸಿ—ಒಂದು ಸುಭದ್ರ ಮಂತ್ರಿ ಮಂಡಲವೇ ರಚಿತವಾಗಬೇಕಾಗಿದ್ದು—ಹೆಚ್ಚು ಕಡಿಮೆ ತುರ್ತು ಪರಿಸ್ಥಿತಿಯೇ ಬಂದೊದಗಿತ್ತು.

"ಗುರುಗಳೇ ಸರ್ವಾಧಿಕಾರಿಗಳಂತೆ ಆಳುವುದೇ ಸರಿ"

"ಅದು ಸರಿ....ಅವರು ಪ್ರೆಸಿಡೆಂಟ್ ಆಗಿರಲಿ....ಮಂತ್ರಿಮಂಡಲ ಮಂಡಿಸಿದ್ದಕ್ಕೆ ಸಹಿ ಹಾಕಿ ಒಪ್ಪಿಗೆ ಸೂಚಿಸಿದರೇ ಸೊಗಸು—ಸರ್ವಾಧಿಕಾರಿಗಳ ಕಾಲ ಆಯ್ತು ಇದು ಪ್ರಜಾಭಿಪ್ರಾಯದ ಕಾಲ. ನಮ್ಮ ಸಂಸ್ಥಾನ ಡೆಮೋಕ್ರಸಿ ತತ್ವದ ಮೇಲೇ ನಡೆಯಬೇಕು."

"ಅಲ್ಲವಯ್ಯ ಕೇವಲ ಒಬ್ಬ ಗೋಪಾಲಕ ಮಠದ ಕಾಂಪೊಂಡಿನಲ್ಲಿ ಸಂಸಾರ ಹೂಡಿದ್ದರೆ—ಅದಕ್ಕೆ ಈ ಅದ್ಧೂರಿಯ ಮಂತ್ರಿ ಮಂಡಲದ ಆಟ ಬೇಕೆ?"

" ಇದು ಆಟವಲ್ಲ ಮಡ್ಡೀ—ತತ್ವ. ಈಗ ನೋಡು ಹಳೇ ಕಾಲದ ರಾಜರ ಹಾಗೆ ಈ ಗುರುಗಳು ಆಡಿದ್ದೇ ಆಟವೆಂದು ಎಂಟು ಕಿಲೋ ದರ್ಭೆ ಕೊಂಡುಕೊಂಡರೆ ಯಾಕೆ ಕೊಂಡಿರಿ? ಟೆಂಡರ್ ಕರೆದಿದ್ದೀರಾ.... ಎಂಬ ಪ್ರಶ್ನೆಯನ್ನು ಕೇಳಲ್ಲಿಕ್ಕೆ ಬಾಯಿ ಇರುತ್ತೆ ನೋಡು ಈ ರೀತಿಯ ವ್ಯವಸ್ಥೆಯಲ್ಲಿ"

" ಇದಕ್ಕೆ ಗುರುಗಳು ಒಪ್ಪುವರೇ?"

" ಅವರು ಒಪ್ಪೋ ಪ್ರಶ್ನೆಯಲ್ಲ ಗಾಂಪಮಠವೇ ಅವರನ್ನು ಆಯ್ದು ಅಧ್ಯಕ್ಷರನ್ನಾಗಿ ಮಾಡಬೇಕಾಗಿದೆ—ನಾನು ನೀನು—ಎಲ್ಲ ಶಿಷ್ಯರೂ ಕೆಲವು ಪ್ರತಿಷ್ಟಿತ ಮಠದ ಅನುಯಾಯಿಗಳೂ ನಿಯಮಿಸಿದ ಮಂತ್ರಿಮಂಡಲವೇ ಆಡಳಿತ ನಡೆಸಬೇಕು."

"ಮರಳಾ ಇದು ನೀನೂ ಮಂತ್ರಿ ಆಗುವ ದುರಾಸೆಯಿಂದ ಹೂಡಿದ ಆಟ ಅಲ್ಲವೇ ?"

"ತತ್ವ ಪರಿಪಾಲನೆಗೆ ದುರಾಸೆ ಅಂದ್ರೇನೂ ಮಂಕೇ. ಈಗ ಮಠಗಳೆಲ್ಲಾ ಇದೇ ರೀತಿ ನಡೆದರೆ ಗಲಾಟೆ ಇಲ್ಲದೆ ಸಂಸ್ಥಾನ ಸಾಗುತ್ತದೆ.

—ಈ ರೀತಿಯಾಗಿ ಮರುಳ ಮಂಕರು ಚರ್ಚೆಯಂ ಗೈಯುತ್ತ ಪ್ರಾರ್ಥನಾ ಮಂದಿರಕೆ ಸಾಗಲ್ ಅಲ್ಲಿ ಸ್ವಯಂ ಗುರುಗಾಂಪರೇ ಅಧ್ಯಕ್ಷತೆಯಂ ವಹಿಸಿರಲ್— ಭಕ್ತಾದಿಗಳೊಡನೆ "ಗಾಂಪತನವನೇ ತೆಯ್ದು ಗಂಧಮಂ ಮಾಡಿ ಈ ಗುರುಗಳ ಮೂರ್ತಿಯನು ಮಾಡಿಹರೊ!"—ಅನ್ನುವಂದದಿ ಕೃಷ್ಣಾಜಿನದಿ ರಾರಾಜಿಸುತ್ತಿದ್ದರ್.

"....ಶಿಷ್ಯರೇ, ಭಕ್ತಾದಿಗಳೇ ನಮ್ಮ ಗಾಂಪ ಸಂಸ್ಥಾನವನ್ನ ಪ್ರಜಾತತ್ವಕ್ಕನುಗುಣವಾಗಿ ಆಡಳಿತ ನಡೆಸಬೇಕೆಂದು ನಮಗೆ ಶಾನೆ ದಿನದಿಂದ ಆಸೆ ಇತ್ತು. ನಮಗೆ ವಯಸ್ಸಾಯಿತು. ನಾವು ನಮ್ಮ ಆಳ್ವಿಕೆಯ ದಿನದ ಈ ಕೊನೆಯ ಹಂತದಲ್ಲಿ ಮುಂಬರುವ ಸ್ವಾಮಿಗಳು ತೊಳಲದಂತೆ ಒಂದು ವ್ಯವಸ್ಥಿತ ಸಂಪ್ರದಾಯ, ಕಾಲಕ್ಕನುಗುಣವಾಗಿರುವಂತೆ ಹಾಕಿಕೊಟ್ಟರೆ ಮುಂದೆ ಅನುಕೂಲ...."

—ಮಡ್ಡಿ ಗಟ್ಟಿಯಾಗಿ ಅತ್ತ.

"ಯಾಕಲೇ ಅಳ್ತೀ"

"ಗುರುಗಳ ಕಾಲ ಮುಗೀತಂತೇ .. ಅವರು ಹಿರಿಯರಾಗಿ ದಾರಿ ಗಾಣಿಸ ಬೇಡವೇ....ಅವರೇ ಇಲ್ಲದ ಈ ಮಠದಲ್ಲಿ ನಾನಿರಲಾರೇ"

"....ಏಯ್ ಅವರು ಸಾಯಲ್ಲಲೇ ಯಾಕ್ಹಂಗೆ ಹೊಡ್ಕಂತಿ—ಸುಮ್ಕಿರು"

" ಶಿಷ್ಯಾ—ಸೈಲೆನ್ಸ್....ನಾನು ಹೇಳೋದು ಕೇಳಿ....ನೀವೆಲ್ಲಾ ಛುನಾಯಿಸಿದ ಮುಂದಾಳುಗಳಲ್ಲಿ ನಾನು ಮಂಡಲ ರಚಿಸುವೆ....ಆದರ ಅವಶ್ಯ ಈಗಿದೆ. ಮಠದಲ್ಲಿನ ಸುಂಡಿಲಿಯ ಕಾಟ ಆ ಶತೃವಿನ ಕಾಟಕ್ಕೆ ತಕ್ಕ ಬಂದೋಬಸ್ತು ಮಾಡಲು ಬಾವುಗ ಸಾಕಲಿಲ್ಲವೆ? ಅದರ ಹಾಲಿಗೆ ಪುಣ್ಯಕೋಟಿ ಬರಲಿಲ್ಲವೆ? ಆ ಸಾಧ್ವಿ ಪುಣ್ಯ

ಕೋಟೆಯ ಕೆಚ್ಚಲಿಗೆ ಕೈಯಿಕ್ಕಿ ಒದೆಸಿಕೊಳ್ಳುತ್ತಿರುವ ನಾರಪ್ಪನವರ ಸಂಸಾರ ಹೇಗೆ ನಡೆಯಬೇಕು—ಅಲ್ಲದೆ ಮಂಗಳಾರತಿ ತಟ್ಟೆಗೆ ಬರುವ ಕಾಸು—ಪಾದಪೂಜೆಗೆ ಬೀಳುವ ಕಾಸುಗಳ ಲೆಕ್ಕ ಇಡಲು ಅರ್ಥಿಕ ಮಂತ್ರಿ ಬೇಡವೇ ?—ನಮ್ಮ ಆರೋಗ್ಯ ನೋಡುವ ಆರೋಗ್ಯ ಮಂತ್ರಿ ಬೇಡವೆ ? ನಿಮ್ಮ ದಡ್ಡತನಕ್ಕೆ ವಿದ್ಯಾಮಂತ್ರಿ ಇರ ಬೇಕು. ಮಠದ ಆಡಳಿತ ಸೌಕರ್ಯದ ದೃಷ್ಟಿಯಿಂದ ಈ ರೀತಿಯ ಏರ್ಪಾಟಾಗಿದೆ ನಾಳೆ ಮಂತ್ರಿ ಮಂಡಲ ಘೋಷಿಸುತ್ತೇವೆ....ಮಹಾಮಂಗಳಾರತಿ ಆಗಲಿ..."

—ಎಂದು ಸಭೆಯಲ್ಲಿ ತೀರ್ಮಾನದ ಮಾತು ಆಡಿದರು.

ಗಾಂಪ ಮಠದಲ್ಲಿ ಇದ್ದ ಶಿಷ್ಯರೇ ಮಂತ್ರಿಗಳು ಎಂಬಂತೆ ಗಾಂಪರೊಡೆಯರು, ತಮ್ಮ ರಾಜ್ಯದ ಆಡಳಿತವನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಲು ಬಂದೂಕು ಬಾರುಮಾಡಿದ್ದರು.

ಮರುದಿನ ಪ್ರಾತಃಕಾಲದಲ್ಲಿ ಮಠದ ಶಂಖಧ್ವನಿ, ಜಾಗಟೆ ನಗಾರಿಗಳು ಮೊಳ ಗುತ್ತಿರಲು, ಗಾಂಪರೊಡೆಯರು ಒಗೆದ ಕಪಿನಿ ಧರಿಸಲು ಕೈಗೆ ತೆಗೆದುಕೊಂಡರು. ಅಧ್ಯಕ್ಷ ಪದವಿಗೇರುವರೆಂಬ ಹೊಟ್ಟೆಕಿಚ್ಚಿನಿಂದಲೋ ಏನೋ ಸುಂಡಿಲಿ ದೊಡ್ಡ ತೂತುಮಾಡಿತ್ತು ಬೆಕ್ಕುಗಳು ನಗುತ್ತಾ ಮುಖ ತೊಳೆದುಕೊಳ್ಳುತ್ತಿದ್ದವು. ಪುಣ್ಯ ಕೋಟಿ ಹಾಲೇ ಹಿಂಡಿರಲಿಲ್ಲ. ನಾರಪ್ಪ ಊರಾಗೇ ಇರಲಿಲ್ಲ. ಮಾರವ್ವ ಬಾಣಂತಿ.

"ಥತ್"—ಎಂದು ಹೇಳುತ್ತಾ ಗದ್ದುಗೆಯನ್ನೇರಿ ಕುಳಿತರು. ಇಡೀ ಸಭೆಯೇ ಗುರುಗಳು ಪ್ರಕಟಿಸಬೇಕಿದ್ದ ಸಚಿವ ಪಟ್ಟಿ ಪ್ರಕಟಿಸಬೇಕಾಗಿತ್ತು ಉಷ್ಣವಾಯು ಕೆರಳಿದ್ದು ಸೊಗದೆ ಬೇರಿನ ಕಷಾಯ ಕುಡಿದು ಗಂಟಲು ಸರಿಮಾಡಿಕೊಂಡರು.

"ಶಿಷ್ಯರೇ ಮತ್ತು ಭಕ್ತರೇ, ಗಾಂಪರೊಡೆಯರ ಮಠದ ಆಡಳಿತ ರೀತಿಯಲ್ಲಿ ಕಾಲಕ್ಕನುಗುಣವಾದ ಡೆಮನಾಕ್ರಸಿ"

—ಗುರುಗಳು ಡೆಮನ್ ಆಕ್ರಸಿ ಎಂದಾಗ ಸಭೆಯಲ್ಲಿ ಗುಸು ಗುಸು ಪ್ರಾರಂಭ ವಾಯಿತು. ಡೆಮಾಕ್ರಸಿಯೆಂಬ ಪದವನ್ನು ತಾವುಗಳು ಮಂತ್ರಿಗಳಾಗುವುವೆಂಬ ಭೀತಿ ಯನ್ನು ಹುಟ್ಟಿಸಲೇ ಡೆಮನ್ ಆಗಿ ಮಾಡಿ ಹೇಳಿರಬೇಕೆಂದು ಮಾತಾಡಿಕೊಂಡರು.

"ಸದ್ದು—ಸದ್ದು—ಮಾತಿಗೆ ಅವಕಾಶ ಒಬ್ಬರು ಮಾತಾಡುವುದು ಮುಗಿದ ಮೇಲೇ....ಮುಖ್ಯವಾಗಿ ನಾವು ಅಧ್ಯಕ್ಷರು– ಈ ಗಾಂಪ ಸಂಸ್ಥಾನಕ್ಕೆ ಮುಖ್ಯಸ್ಥರು ಮಾತಾಡುವಾಗ, ನೀವು ನಾಲಿಗೆ ಹೊರಳಿಸುವುದೆಂದರೇನು ! ಸದ್ದು....ಈಗ ಬಹು ಮುಖ್ಯವಾದ ಸಚಿವ ಪಟ್ಟಿಯನ್ನು ಪ್ರಕಟಿಸಲು ನಮಗೆ ತುಂಬಾ ಹೆಮ್ಮೆ ಎನಿಸುತ್ತದೆ ....ಮೊಲನೆಯದಾಗಿ ಅಧ್ಯಕ್ಷಪದವಿಯ ಜೊತೆ ಮುಖ್ಯ ಮಂತ್ರಿ ಪದವಿಯನ್ನು ಬಹು ಜನದ ಇರಾದೆಯಂತೆ ನಾವೇ ಇಟ್ಟುಕೊಂಡಿದ್ದೇವೆ.

ಗಾಂಪರು—ಮುಖ್ಯ ಮಂತ್ರಿ ವಿದ್ಯೆ ಸಂಸ್ಕೃತಿ

ಮರುಳ—ಆರೋಗ್ಯಮಂತ್ರಿ

ಮುಡೆಯ—ಆರ್ಥಿಕ

ಮುಡ್ಡಿ—ಸಂಚಾರ ಮತ್ತು ಮರಾಮತ್

ಮುಟ್ಟಾಳ್—ಸಹಕಾರ, ವಿದ್ಯುತ್ ಶಕ್ತಿ, ಅನಾಮತ್ ಮತ್ತು ಆಹಾರ

—ಇದರಲ್ಲಿ ಅನ್ಯಾಯವಾದದ್ದು ಮಂಕನಿಗೆ. ಕೆರಳಿ ಕೆಂಡವಾಗಿದ್ದ. ಅವನು ವಿರೋಧಪಕ್ಷದ ಏಕೈಕ ನಾಯಕನಾಗಿ ಬೆಂಬಲಕ್ಕೆ ತನ್ನ ಬೆನ್ನೇ ಇರಲೆಂದು ನಿಂತಿದ್ದ.

ಡೆಮಾಕ್ರಸಿಯ ನಾಟಕದಲ್ಲಿ ವಿರೋಧ ಪಕ್ಷವೂ ಇರಬೇಕಲ್ಲವೆ! ಗುರುಗಳು ಪ್ರಕಟಿಸಿದ ಸಚಿವ ಪಟ್ಟಿಯಿಂದ ಪುಳುಕಿತರಾದ ಕಂತ್ರಿಗಳು ತಂತಮ್ಮ ಕಡೆಯ ಪುಡಾರಿಗಳಿಗೂ ತಮ್ಮ ಸ್ವಂತ ಸಂಚಾರಿ ಭತ್ಯಕ್ಕೂ ವಿಶೇಷ ಸೌಲಭ್ಯಗಳಿಗೂ ಹಲುಬಿದರು.

"ಮಠಕ್ಕೆ ಬೇಕಾದ ಸೊಗದೆಬೇರಿನ ಷರಬತ್ತು, ಶುಂಠಿ ಕಷಾಯ, ಕೆಂಪು ಕಲ್ಸಕ್ರೆ, ಕುಪ್ಪಿ ಮಾತ್ರೆ, ಕಸ್ತೂರಿ ಮಾತ್ರೆ, ಅಳಲೆಕಾಯಿಗಳನ್ನು ಒಂದೇ ಬಾರಿ ಪೇಟೆಯಿಂದ ತರಲಿಕ್ಕೆ ಆಗೋದಿಲ್ಲವೆ? ಒಂದೊಂದಕ್ಕೂ ಪ್ರತ್ಯೇಕವಾಗಿ ಸಂಚಾರಿ ಭತ್ಯ ತೆಗೆದುಕೊಂಡಿರುವುದು ನ್ಯಾಯವೆ? ಅಲ್ಲದೆ ಇವೆಲ್ಲಕ್ಕೂ ಟೆಂಡರ್ ಯಾಕೆ ಕರೆಯಲಿಲ್ಲ? ಮುಖ್ಯ ಮಂತ್ರಿಗಳು ಆರೋಗ್ಯ ಸಚಿವ ಮರುಳಯ್ಯನವರ ಈ ದುಬಾರಿ ದುಂದು ವೆಚ್ಚದ ಬಗ್ಗೆ ವಿವರ ಕೊಡಬೇಕು"

—ಎಂದು ಸಿಡಿದೆದ್ದಿದ್ದ ಮಂಕ.

"ಇದು ನಮ್ಮ ಗಮನಕ್ಕೆ ಬಂದಿದೆ ವಿಚಾರಿಸಲಾಗುವದು."

"ನಾರಪ್ಪನ ಹೆಂಡತಿ ಮಾರವ್ವ ಈ ಮೂರು ವರ್ಷದಲ್ಲಿ ಮೂರು ಸಲ ಅವಳಿ ಜವಳಿ ಹೆತ್ತು ಮಠವನ್ನು ಶಿಶು ವಿಹಾರವನ್ನಾಗಿ ಮಾಡಿದ್ದಾಳೆ. ಮಿತ ಸಂತಾನದ ಈ ದಿನಗಳಲ್ಲಿ ಇದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ"

"....ನೋಟೀಸ್"

"ಮಾನ್ಯ ವಿದ್ಯುತ್ ಮಂತ್ರಿಗಳ ಹಾವಳಿ ಹೆಚ್ಚಾಗಿದೆ. ಅವರು ಮಂತ್ರಿಗಳಾದ ದಿನದಿಂದ ಮಠದ ದೀಪ ಆರಿಹೋಗಿದೆ; ಆಹಾರ ಮಂತ್ರಿಗಳು ದೇವರ ದೀಪಕ್ಕೆ ಎಣ್ಣೆ ಕೊಡುತ್ತಿಲ್ಲ. ಕೇಳಿದರೆ ಸಂಚಾರಿ ಮಂತ್ರಿಗಳು ಕುದುರೆಯನ್ನು ವೆಟರ್ನಿಟಿ ಆಸ್ಪತ್ರೆಗೆ ಕಳಿಸಿದ್ದಾರೆ ಹೋಗಲು ವ್ಯವಸ್ಥೆ ಇಲ್ಲ ಎಂದು ಸಬೂಬು ಹೇಳುತ್ತಾರೆ.

"ನೋಟೀಸ್"

"ಮೇಲಾಗಿ ಕಿಟ್ಟಪ್ಪನ ಹತ್ತಿರ ಕೊಂಡ ಸ್ಕೂಟರ ರಿಪೇರಿಗೆ ಸಾವಿರ ರೂಪಾಯಿ ವೆಚ್ಚವಾದರೂ ಅದು ರಸ್ತೆ ಕಂಡಿಲ್ಲ. ಇದರಿಂದ ಮಠದ ಘನತೆ ಹಾಳಾಗಿದೆ. ಮಂತ್ರಿಗಳಿಗೆ ಏನು ಬೇಕಾದರೂ ಸಿಗುತ್ತದೆ ಮಿಕ್ಕವರಿಗೇಕೆ ತೊಂದರೆ?...."

ತಮ್ಮ ಸರ್ಕಾರವನ್ನು ಯದ್ವಾ ತದ್ವ ತರಾಟೆಗೆ ತೆಗೆದುಕೊಂಡು ಮಂಕನು ಆಡಳಿತದಲ್ಲೇ ಅವಿಶ್ವಾಸ ವ್ಯಕ್ತಪಡಿಸಿ, ಎಗರಲಾಡಿದ್ದು ಗುರುಗಳಿಗೆ ಯೋಚನೆಗೀಡುಮಾಡಿತು.

ಈ ಮಂಕನಿಗೂ ಖಾದಿ ಬೋರ್ಡಿನ ಅಧ್ಯಕ್ಷಗಿರಿಯನ್ನೋ ಅಥವ ಯಾವುದಾದರೂ ನಿಯೋಗದ ನಾಯಕನನ್ನಾಗಿ ಮಾಡಿದರೆ ದಾರಿಗೆ ಬಂದಾನೆಂದು ಯೋಚಿಸಿದರು. ಆದರೆ ಮೊದಲ ಮಂತ್ರಿ ಪಟ್ಟಿಯಲ್ಲಿ ತಾನಿಲ್ಲದಿದ್ದುದು ಅವನು ಈ ಗಾಂಪ ಸರ್ಕಾರ ಟೀಕಿಸಲಿಕ್ಕೇ ಹುಟ್ಟಿದವನಂತೆ ಕೆರಳಿದ್ದ.

"ಪುಣ್ಯಕೋಟಿ ಹಾಲೇಕೆ ಕೊಡುವುದಿಲ್ಲ."

"ಮೂಷಕದ ಹಾವಳಿ ಹೆಚ್ಚಿ ಅವು ಹೆಗ್ಗಣಗಳಾಗುತ್ತಿವೆ."


"ಬೆಕ್ಕುಗಳು ಮಾರ್ಜಾಲ ಸನ್ಯಾಸಿಗಳಂತೆ ತಪಸ್ಸಿಗೆ ಕೂತಿವೆ."

"ನಾರಪ್ಪನ ಮಕ್ಕಳು ಜಪದಮಾಲೆ ಹರಿದು ತುಂಡರಿಸಿ ಗೋಲಿಮಾಡಿಕೊಂಡಿದ್ದಾರೆ ..."

—ಒಂದಲ್ಲ ನೂರು ಅಪಾದನೆ ಪಟ್ಟಿ ಮಾಡಿದ್ದ ಮಂಕ.

ಇವುಗಳೊಂದಕ್ಕೂ ಜಗ್ಗದ ಗುರುಗಳು ಎಲ್ಲಕ್ಕೂ ನೋಟೀಸ್ ಕೊಡುತ್ತಾ ಸಂಸ್ಥಾನವನ್ನು ಸುಭದ್ರ ಸರ್ಕಾರದಂತೆಯೇ ನಡೆಸುವೆನೆಂಬ ಭ್ರಮೆಯಲ್ಲಿ ಹಾರಾ ಹಾಕಿಕೊಂಡು ಕೈ ತಾವೇ ತಟ್ಟಿಕೊಳ್ಳುತ್ತಿದ್ದರು.

—ದಾಶರಥಿ ಧೀಕ್ಷಿತ್



"ಬೇಗನೆ ಹೇಳಿ ಅವರ ಭಾಷಣ ಮುಗಿಯೋಕ್ ಮುಂಚೆ, ಗಾಂಧೀಜಿ ಹುಟ್ಟಿದ್ ಯಾವಾಗ ಸತ್ತಿದ್ ಯಾವಾಗ, ಯಾಕ್ ಸತ್ತ, ಯಾಕೆಂದರೆ, ನಾನು ಹೊಸದಾಗಿ ಮಂತ್ರಿಯಾದವ್ನು, ಡೀಟೈಲ್ ಗೊತ್ತಿಲ್ಲ.'



ದೀಪಾವಳಿ ಉಡುಗೊರೆ..
ಕರ್ನಾಟಕ
ಫಿಲಂಸ್
ಅರ್ಪಿಸುವ
ಶ್ರೀ ಸರಸ್ವತಿ ಚಿತ್ರರವರ
ಜೇನು ಗೂಡು
ಸಂಭಾಷಣೆ
ಸೋರಟ್ ಅಶ್ವಥ್
ಗೀತೆಗಳು ಕು ರ ಸೀತಾರಾಮಶಾಸ್ತ್ರಿ
ಸೋರಟ್ ಅಶ್ವಥ್
ಸಂಗೀತ ವಿಜಯಕೃಷ್ಣಮೂರ್ತಿ
ಛಾಯಾಗ್ರಹಣ ಆರ್ ಮಧು
ಹಂಚಿಕೆ, ಮುಂಬಯಿ ಕರ್ನಾಟಕ
ಶ್ರೀನಿವಾಸ ಪಿಕ್ಚರ್ಸ್ ಗದಗ
ನಿರ್ದೇಶನ ವೈ. ಆರ್. ಸ್ವಾಮಿ ಎಂ.ಎ.
NEGATIVE RIGHTS CONTROLLED BY | KARNATAKA FILMS LTD BANGALORE 9


For 3 way Beauty Treatment...
RAJA
SNOW
AMLA HAIR OIL , KASTURI SOAP
MANYAM & CO BANGALORE MADRAS MADURAI BOMBAY
FAS

Printed by B. S Iyengar, Bangalore-2

Publisher—B. N. Gupta Editor—M Sivaram